بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْکَرِيْمِ    وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಸಂಚಿಕೆ: 26

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01 ಜುಲೈ 2021, 01 ವಫಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
20 ಝುಲ್ ಖಅ್‌ದ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوا اتَّقُوا اللّٰهَ وَابْتَغُوْۤا اِلَيْهِ الْوَسِيْلَةَ وَجَاهِدُوْا فِيْ سَبِيْلِهٖ لَعَلَّكُمْ تُفْلِحُوْنَ○

(ಅಲ್‌ಮಾಇದ: 36)

ಅಂದರೆ: ಎಲೈ ವಿಶ್ವಾಸಿಗಳೇ, ನೀವು ಅಲ್ಲಾಹನ ಭಯ ಭಕ್ತಿಯುಳ್ಳವರಾಗಿರಿ, ಅವನ ಸಾಮೀಪ್ಯವನ್ನು ಪಡೆಯುವ ಮಾರ್ಗವನ್ನು ಹುಡುಕಿರಿ, ಅವನ ಮಾರ್ಗದಲ್ಲಿ ಅತ್ಯಧಿಕ ಪರಿಶ್ರಮಿಸಿರಿ, ನೀವು ವಿಜಯಶಾಲಿಗಳಾಗಲಿಕ್ಕಾಗಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಾತ್ರಿಯ ವೇಳೆ ದಫನ್ ಮಾಡುವುದು (ಅಂತ್ಯ ಸಂಸ್ಕಾರ)

(1340) ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. ನಬಿ(ಸ) ರವರು ಓರ್ವ ವ್ಯಕ್ತಿಯ ನಮಾಝ್ ಜನಾಝಾ, ಅವರನ್ನು ದಫನ್ ಮಾಡಿದ ಒಂದು ರಾತ್ರಿಯ ನಂತರ ನಿರ್ವಹಿಸಿದರು. ಅವರು ಮತ್ತು ಅವರ ಸಹಾಬರು ನಿಂತುಕೊಂಡರು ಮತ್ತು ಅವರು ಕೇಳಿದರು. ಇದು ಯಾರ ಗೋರಿಯಾಗಿದೆ. ಜನರು ಹೇಳಿದರು. ಇಂತಹವರ ಗೋರಿಯಾಗಿದೆ. ನಿನ್ನೆ ರಾತ್ರಿ ದಫನ್ ಮಾಡಲಾಗಿತ್ತು. ನಬಿ(ಸ) ಅವರ ನಮಾಝ್ ಜನಾಝಾ ನಿರ್ವಹಿಸಿದರು.

ಹಝ್ರತ್ ಸಯ್ಯದ್ ಝೈಮುಲ್ ಆಬಿಹೀನ್ ವಲಿಯಲ್ಲ್ ಶಾಹ್(ರ) ಹೇಳುತ್ತಾರೆ. ಹಝ್ರತ್ ಜಾಬಿರ್(ರ) ಅವರ ವರದಿಯ ಆಧಾರದಿಂದ ಇಬ್ನು ಹಬಾನ್ ನಕಲು ಮಾಡಿದ್ದಾರೆ. ಕೆಲವರು ಈ ಫತ್ವಾ ನೀಡಿದ್ದಾರೆ. ರಾತ್ರಿ ವೇಳೆ ಧಫನ್ ಮಾಡುವುದು ವಿಶೇಷವಾಗಿದೆ. ಇಬ್ನು ಹಿಬಾನ್ ವರದಿಯ ಪದಗಳು ಹೀಗಿವೆ. **ಅನ್ನನ್ನಬಿ(ಸ) ಝುಜರ ಅಂಯುಖ್ಬರ ರಜುಲುನ್ ಲೈಲನ್ ಇಲ್ಲಾ ಅಂಯುರ್ಝ್‌ತರ್ರ ಇಲಾ ಝುಲಿಕ** (ಫತಹಲ್ ಬಾರಿ ಭಾಗ–3, ಪುಟ–265) ನಬಿ(ಸ) ಕೇವಲ ಅಸಮಾಧಾನ ಪರಿಸ್ಥಿತಿಯಿದ್ದರೆ ಮಾತ್ರ ಶವವನ್ನು ರಾತ್ರಿ ದಫನ್ ಮಾಡಬಹುದು. ಕೆಲ ಫಿಖ್‌ಹಾಗಳು (ಧರ್ಮಶಾಸ್ತ್ರ ಪಂಡಿತರು) ಈ ವರದಿಯನ್ನು ಆಧಾರವಾಗಿಟ್ಟು ರಾತ್ರಿ ಮೇಲೆ ದಫನ್ ಮಾಡುವುದು ನಿಷೇಧವಾಗಿದೆ ಎಂಬ ಫತ್ವಾ ನೀಡಿದ್ದಾರೆ. ಈ ಫತ್ವಾ ರದ್ದುಪಡಿಸುವ ಸಲುವಾಗಿ 69ನೇ ಅಧ್ಯಾಯ ಪರಿಗಣಿಸಲಾಗಿದೆ. ಇಮಾಮ್ ಮುಸ್ಲಿಮ್ ಸಹ ಓರ್ವ ವ್ಯಕ್ತಿಯ ರಾತ್ರಿ ವೇಳೆ ಧಫನ್ ಮಾಡಿರುವ ಪೈಕಿ ವರದಿ ಮಾಡಿದ್ದಾರೆ. ಅದರಲ್ಲಿ ನಬಿ(ಸ) ಅಸಂತುಷ್ಟತೆ ವ್ಯಕ್ತಪಡಿಸಿದರು ಎಂಬ ವಿವರವು ಇದೆ. ಮತ್ತು ಹೀಗೆ ನಿರ್ದೇಶನ ನೀಡಿದರು. **ಇಝಾ ಕಫ್ಫನ ಅಹದುಕುಮ್ ಅಖಾಹು ಫಲ್‌ಯುಹ್ಸಿನ್ ಕಫ್‌ನಹೂ** ನಿಮ್ಮ ಪೈಕಿ ಯಾರೊಬ್ಬ ಸಹೋದರನ ಕಪನ್ ಧನ್ ಕಾರ್ಯ ನಿಮ್ಮ ಹೊಣೆಯಾಗಿದ್ದರೆ ಚೆನ್ನಾಗಿ ಅದನ್ನು ನಿಭಾಯಿಸಿರಿ. ಇದರಿಂದ ತಿಳಿದು ಬರುವುದೇನೆಂದರೆ ಅಸಂತುಷ್ಟಿಗೆ ಕಾರಣ ಕಫನ್ ದಫನ್ ಮಾಡುವ ರೀತಿಯ ನ್ಯೂನತೆ ಆಗಿತ್ತು. **(ಸಹೀಹ್ ಬುಖಾರಿ ಸಂಪುಟ–2, ಕಿತಾಮಲ್ ಜನಾಯಿಝ್, ಮುದ್ರಣ 2006, ಖಾದಿಯಾನ್)**

**ನಸೀಬೈನ್ ದೊರೆಯು ಮಸೀಹ್(ಅ) ಪೀಡನೆಗೆ ಒಳಗಾಗಿದ್ದನ್ನು ಕಂಡು ಅವರಿಗೆ ಅವರ ಶಿಷ್ಯರ ಸಮೇತ ತಮ್ಮ ಬಳಿಗೆ ಬರಲು ಪತ್ರ ಬರೆದಿದ್ದರು. ಆದುದರಿಂದ ಮಸೀಹ್(ಅ) ನಸೀಬೈನ್‌ಗೆ ಅವಶ್ಯವಾಗಿ ಬಂದಿರಲೇಬೇಕು ಮತ್ತು ಅದೇ ಮಾರ್ಗವಾಗಿ ಅವರು ಭಾರತಕ್ಕೆ ಬಂದರು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಈಸ ಮಸೀಹರ ಮರಣ ಶಿಲುಬೆಯ ಮೇಲೆ ಆಗಲಿಲ್ಲ

ಈಸ ಮಸೀಹರ ಮರಣ ಶಿಲುಬೆಯ ಮೇಲೆ ಆಗಲಿಲ್ಲ ಎಂದರೆ ಕ್ರೈಸ್ತರ ಸ್ತಂಭವೇ ಮುರಿದು ಹೋಗುತ್ತದೆ. ಏಕೆಂದರೆ ಶಿಲುಬೆಯ ಮೇಲೆ ಮಸೀಹರ ಮರಣವೇ ಆಗಲಿಲ್ಲ ಅಂದ ಮೇಲೆ ಅವರು ಮೂರು ದಿನಗಳ ನಂತರ ಜೀವಂತಗೊಂಡು ಆಕಾಶಾರೋಣ ಮಾಡಿದರು ಎಂಬ ವಿಶ್ವಾಸ ಮತ್ತು ಅವರನ್ನು ದೇವರನ್ನಾಗಿ ಮಾಡುವ ವಿಶ್ವಾಸ ಬುಡ ಸಮೇತ ಕಿತ್ತುಕೊಂಡು ಹೋಗುತ್ತದೆ. ಅದೇ ರೀತಿ ಮುಸಲ್ಮಾನರ ತಪ್ಪು ಕಲ್ಪನೆ (ಅದರಿಂದ ರಸೂಲುಲ್ಲಾಹ್(ಸ) ರವರ ಘೋರ ಅವಮಾನವಿದೆ. ಅವರು ಈಸಾ(ಅ) ಅವರು ಜೀವಂತವಾಗಿ ಆಕಾಶಕ್ಕೆ ಹೋಗಿದ್ದಾರೆ ಪುನಃ ಅವರು ಅವತರಿಸುವರು, ಅದಾಗ್ಯೂ ರಸೂಲುಲ್ಲಾಹ್(ಸ) ರವರ ನಂತರ ಯಾವ ಹೊಸ ನಬಿಯನ್ನಾಗಲಿ, ಹಳೆಯದ್ದಾಗಿರಲಿ ಬರುವುದಿಲ್ಲ. ಅವರ ನುಬುವ್ವತ್ (ಪ್ರವಾದಿತ್ವದ) ಮೇಲೆ ನಬಿ(ಸ) ರವರ ಮುದ್ರೆ (ಮೊಹರ್) ಇಲ್ಲದಿದ್ದರೆ) ಸಹ ದೂರವಾಗುತ್ತದೆ ಮತ್ತು ಪವಿತ್ರ ಖುರ್‌ಆನ್‌ನ ನಿಜವಾದ ಮತ್ತು ಪವಿತ್ರವಾದ ಶಿಕ್ಷಣ ಸತ್ಯವಾಗುತ್ತದೆ. ಏಕೆಂದರೆ ಪವಿತ್ರ ಖುರ್‌ಆನ್‌ನಲ್ಲಿ ಮಸೀಹ್(ಅ) ನಿಚ್ಚಳವಾಗಿ **"ಫಲಮ್ಮಾ ತವಫೈತನಿ"** ಎಂಬ ಉಚ್ಚಾರದಿಂದ ಸ್ಪಷ್ಟವಿದೆ. ಅದನ್ನು ಯಾರಿಗೂ ಅಲ್ಲಗಳೆಯಲು ಸಾಧ್ಯವಿಲ್ಲ.

### ಮಸೀಹ್(ಅ) ರ ಮರಣಕ್ಕೆ ಒತ್ತು ಕೊಡಲು ಕಾರಣ

ಅದೇ ಕಾರಣದಿಂದ ನಾವು ಮಸೀಹ್(ಅ) ರವರ ಮರಣದ ಕುರಿತು ಒತ್ತು ನೀಡುತ್ತೇವೆ. ಏಕೆಂದರೆ ಅವರ ಮರಣದ ಜೊತೆಯಲ್ಲೇ ಕ್ರೈಸ್ತ ಮತವೂ ಮರಣ ಹೊಂದುತ್ತದೆ. ಅದೇ ಉದ್ದೇಶದಿಂದ ನಾನು "ಮಸೀಹ್ ಹಿಂದೂಸ್ತಾನ್ ಮೇ" ಗ್ರಂಥ ಬರೆಯಲು ಪ್ರಾರಂಭಿಸಿದ್ದೇನೆ. ಈ ಗ್ರಂಥದ ಉದ್ದೇಶವನ್ನು ಈಡೇರಿಸಲು, ಅಲ್ಲಿ ಅವರು ಬಂದ ಸುಳಿವುಗಳನ್ನು ಪತ್ತೆ ಹಚ್ಚಲು, ನಾನು ನನ್ನ ಜಮಾಅತಿನ ಕೆಲ ವ್ಯಕ್ತಿಗಳನ್ನು ಆ ಕ್ಷೇತ್ರಗಳಿಗೆ ಹೋಗಿ ಸಂಶೋಧನೆ ನಡೆಸಲು ಕಳುಹಿಸ ಬಯಸಿದ್ದೇನೆ, ಅಂದ ಹಾಗೆ ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ಸಭೆಯನ್ನು ಆಯೋಜಿಸಿದ್ದೇವೆ. ಆ ಮಿತ್ರರೆಲ್ಲರಿಗು ವಿದಾಯ ಕೋರುವ ಮುಂಚೆ ನಾವೆಲ್ಲರೂ ಕೂಡಿ ಅದಕ್ಕಾಗಿ ಪ್ರಾರ್ಥಿಸೋಣ. ಅವರು ಕ್ಷೇಮ ಸೌಖ್ಯ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

**ಯೂರೋಪಿಯನ್ ಸಂಶೋಧಕರು ಒಪ್ಪಿಕೊಳ್ಳುತ್ತಾರೆ. ಅರಬ್ ಮುಸಲ್ಮಾನರು ಇರದಿರುತ್ತಿದ್ದರೆ ಇಂದು ಲೋಕಜ್ಞಾನದ ಈ ಮಟ್ಟಕ್ಕೆ ತಲುಪುತ್ತಿರಲಿಲ್ಲ. ಅಷ್ಟೇ ಅಲ್ಲ ಅರಬರು ಆಧ್ಯಾತ್ಮಿಕತೆಯಲ್ಲಿ ಸಾದಿಸಿದ ಉನ್ನತಿ, ಅದರ ಉದಾಹರಣೆ ಲೋಕ ಆರಂಭದಿಂದ ಹಿಡಿದು ಇಲ್ಲಿಯವರೆಗೂ ಯಾವ ಸಮುದಾಯದಲ್ಲೂ ಕಾಣಸಿಗದು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ಅ) ಸೂರಃ ಇಬ್ರಾಹಿಂ ವಚನ 2 **ಅಲಿಫ್ ಲಾಮ್ಮ್ ರಾ, ಕಿತಾಬುನ್ ಅನ್‌ಝುಲ್‌ನಾಹು ಇಲೈಕ ಲಿತುಖ್ರಿಜನ್ನಾಸ ಮಿನಝ್ಝುಲುಮಾತಿ ಇಲನ್ನೂರ್, ಬಿಇಝ್ನಿ ರಬ್ಬಿಹಿಮ್ ಇಲಾ ಸಿರಾತಿಲ್ ಅಝೀಝಿಲ್‌ಹಮೀದ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಈ ವಚನದಲ್ಲಿ ತಿಳಿಸಲಾಗಿದೆ. ಪವಿತ್ರ ಖುರ್‌ಆನ್ ಒಂದು ಪ್ರಕಾಶವಾಗಿದೆ. ಆ ಮೂಲಕ ಮುಹಮ್ಮದ್ ರಸೂಲುಲ್ಲಾಹ್(ಸ) ಜನರಿಗೆ ಅಂಧಕಾರದಿಂದ ಬೆಳಕಿನತ್ತ ಕರೆದುಕೊಂಡು ಹೋಗುವರು. ಮತ್ತೆ ಪ್ರಕಾಶದ ವಿಶ್ಲೇಷಣೆ– **"ಇಲಾ ಸಿರಾತಿಲ್ ಹಮೀದ್"** ನಿಂದ ವ್ಯಕ್ತಪಡಿಸಿದರು. ಅಂದರೆ ಪ್ರತಾಪಶಾಲಿ ಹಾಗೂ ಸ್ತುತ್ಯರ್ಹನಾದ ಅಲ್ಲಾಹನ ಮಾರ್ಗವೇ ನಿಜವಾದ ಪ್ರಕಾಶವಾಗಿದೆ. ಪ್ರಕಾಶವನ್ನು ಎಲ್ಲರೂ ಮೆಚ್ಚುತ್ತಾರೆ. ಆದರೆ ಪ್ರಕಾಶದ ವಿಶ್ಲೇಷಣೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಇಂದು ಜನರು ಹೇಳುತ್ತಾರೆ. ಇವರು ಹೊಸ ಪ್ರಕಾಶದ ಜನರಾಗಿದ್ದಾರೆ ಅಂದರೆ ಅದರ ತಾತ್ಪರ್ಯ ಆಧುನಿಕ ತತ್ವ ಮತ್ತು ಸಂಸ್ಕೃತಿ, ಸ್ವಾತಂತ್ರ್ಯ ಮತ್ತು ನಾಸ್ತಿಕರ ಅನುಯಾಯಿಗಳು ಎಂದು ಒಬ್ಬರ ಅಂಬೋಣ. ಮಸೀಹಿಯತ್ (ಕ್ರೈಸ್ತಧರ್ಮ)

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

إِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

## ಅಬ್ದುಲ್ಲ ಆಥಮನು ನಾನು ಇಸ್ಲಾಮಿನ ಭವಿಷ್ಯವಾಣಿಯಿಂದ ಹೆದರಿಕೊಂಡಿಲ್ಲ ಎಂದು ಒಪ್ಪಿಕೊಂಡರೆ, ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನದ ಘೋಷಣೆ.

ಈ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಆಥಮನು ನಿಜವಾಗಿಯೂ ಸತ್ಯದೆಡೆ ರುಜುಪಡಿಸಿಕೊಂಡಿದ್ದೇನೆ ಎಂಬ ಕುರಿತು ಬೆಳಕು ಚೆಲ್ಲುವೆವು. ಅವನು ಹಝ್ರತ್ ಮಸೀಹ್ ಮೌಊದ್(ಅ) ರವರು ಭವಿಷ್ಯವಾಣಿಯಿಂದ ಎಷ್ಟರ ಮಟ್ಟಿಗೆ ಭಯಗೊಂಡಿದ್ದರೆಂದರೆ ಅವನು ಸಾವಿನ ಸಮೀಪ ತಲುಪಿದ್ದನು. ಅವನು ಅವರ ಭವಿಷ್ಯವಾಣಿಯನ್ನು ಸುಳ್ಳೆಂದು ಭಾವಿಸುತ್ತಿದ್ದರೆ ಭಯದ ಯಾವ ಅವಶ್ಯಕತೆಯೂ ಇರಲಿಲ್ಲ. ಅವನು ಇಸ್ಲಾಮಿನ ಭವಿಷ್ಯವಾಣಿಯ ಪ್ರಭಾವದಿಂದ ಪ್ರಭಾವಿತನಾಗಿ ಅವನ ಹೆದರಿಕೆಯೂ ಸತ್ಯದೆಡೆ ರುಜುಪಡಿಸಿಕೊಂಡದ್ದು ಸೂಚಿಸುತ್ತದೆ.

ಭವಿಷ್ಯವಾಣಿಯ ಸಮಯದಿಂದಲೇ ಆಥಮನು ಭಯಭೀತನಾಗಿದ್ದ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಭವಿಷ್ಯವಾಣಿ ಆಲಿಸುತ್ತಲೇ ಆಥಮನ ಮುಖದಲ್ಲಿ ಒಂದು ಭಯದ ಪ್ರಭಾವ ಆವರಿಸಿತ್ತು. ಈ ಭಯ ಮತ್ತು ಗಾಬರಿಗೊಳ್ಳುವಿಕೆಯ ಭವಿಷ್ಯವಾಣಿ ಕೇಳಿದ ಸಮಯದಿಂದಲೇ ಗೋಚರವಾಗತೊಡಗಿತ್ತು. ಮತ್ತೆ ಅದು ದಿನೇ ದಿನೇ ಹೆಚ್ಚುತ್ತಲೇ ಹೋಯಿತು. ಮತ್ತು ಆಥಮನ ತನುಮನದಲ್ಲಿ ಸೇರಿಕೊಂಡಿತು. "ನೂರ್ ಅಫ್ಶಾಂ" ಪತ್ರಿಕೆಯಲ್ಲಿ ಸ್ವಯಂ ಪ್ರಕಟಿಸಿದಂತೆ ಭಯಾನಕ ಭಯಭೀತ ದೃಶ್ಯಗಳು ಪ್ರೇರಿತರೂಪದಲ್ಲಿ ಕಾಣುತ್ತಿದ್ದವು. (ಝಿಯಾವುಲ್ ಹಖ್, ರೂಹಾನಿ ಖಝಾಈನ್, ಸಂಪುಟ–9, ಪುಟ–261)

**ಆಥಮನು ಭಯಗೊಂಡ ಮತ್ತು ಅಳುವ ಸುದ್ದಿ "ನೂರ್‌ಅಫ್ಶಾಂ" ಪತ್ರಿಕೆಯಲ್ಲಿ ಪ್ರಕಟವಾಗಿತ್ತು.**

ಪತ್ರಿಕೆ "ನೂರ್‌ಅಫ್ಶಾಂ" ಲೂಧಿಯಾನದಿಂದ ಮುದ್ರಣಗೊಳ್ಳುತ್ತದೆ. ಅದು ಹಝ್ರತ್ ಮಸೀಹ್ ಮೌಊದ್(ಅ) ರವರ ಬಗ್ಗೆ ದ್ವೇಷಕಾರುವ ಕ್ರೈಸ್ತರ ಪತ್ರಿಕೆಯಾಗಿತ್ತು. ನಿಜ ಅರ್ಥದಲ್ಲಿ ಅದು ಕ್ರೈಸ್ತರ ಪ್ರತಿನಿಧಿತ್ವ ವ್ಯಕ್ತಪಡಿಸುತಿತ್ತು. ಹಝ್ರತ್ ಮಸೀಹ್ ಮೌಊದ್(ಅ) ರವರ ವಿರುದ್ಧ ಕಠಿಣ ಶಬ್ದಗಳ ಉಪಯೋಗ ಮಾಡುತಿತ್ತು. ಪಾದರಿಗಳು ತಮ್ಮ ಪ್ರಬಂಧ ಮತ್ತು ಜಾಹೀರಾತುಗಳನ್ನು ಇದರಲ್ಲಿ ಪ್ರಕಟಣೆ ನೀಡುತ್ತಿದ್ದರು. ಆಥಮನ ಅಳುವ ಮತ್ತು ಹೆದರಿಕೊಳ್ಳುವ ಸುದ್ದಿ ಅದರಲ್ಲಿ ಪ್ರಕಟವಾಗಿತ್ತು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. 14 ಸೆಪ್ಟೆಂಬರ್ 1894 ರಲ್ಲಿ ಪ್ರಕಟಗೊಂಡ "ನೂರ್‌ಅಷ್ಕಾಂ" ಪತ್ರಿಕೆಯ ಪುಟ 12 ರ ಮೊದಲ ಅಂಕಣದ ಮೊದಲ ಸಾಲಿನಲ್ಲೇ ಅವನ ಈ ಹೇಳಿಕೆ ಬರೆಯಲಾಗಿತ್ತು. ನನ್ನ ಹತ್ಯೆಯು ಆಗಬಹುದು ಎಂದು ನನ್ನ ಭಾವನೆ ಆಗಿತ್ತು. ಅದೇ ಅಂಕಣದಲ್ಲಿ ಇದು ಸಹ ಬರೆಯಲಾಗಿದೆ. ಅವರು ಈ ಮಾತುಗಳನ್ನು ಹೇಳಿ ಅಳತೊಡಗಿದರು. ಹೀಗೆ ಅಳುವ ಮೂಲಕ ಅವರು ತಾನು ದು:ಖದಲ್ಲಿದ್ದೇನೆ ಎಂದು ತೋರಿಸಿಕೊಟ್ಟಿದ್ದಾರೆ. ಅಂದ ಹಾಗೆ ಅವರ ಈ ಅಳು, ಇಸ್ಲಾಮಿ ಭವಿಷ್ಯವಾಣಿ ಪ್ರಭಾವ ಬೀರಿದ್ದನ್ನು ಸಾಕ್ಷ್ಯಪಡಿಸುತ್ತದೆ. ನನಗೆ ಸುಳ್ಳುಗಾರನೆಂದು ಭಾವಿಸಿಕೊಂಡಿದ್ದರೆ ಏಕೆ ಈ ಆಪತ್ತು ಬೀಳುತ್ತಿತ್ತು. ಅದನ್ನು ನೆನಪಿಸಿಕೊಂಡು ಅಳು ಬರುತ್ತಿತ್ತು. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಯಿನ್, ಸಂಪುಟ–9, ಪುಟ–66)

**ಭಯಾನಕ ಸಾದೃಶ್ಯಗಳಲ್ಲಿ ಮೊದಲು ರಕ್ತಪಿಪಾಸಿ ಹಾವುಗಳು ಕಂಡುಬಂದವು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ಆಥಮನಿಗೆ ರಕ್ತಪಿಪಾಸಿ ಹಾವುಗಳು ಕಾಣತೊಡಗಿದವು. ಆದಾಗ್ಯೂ ಅವನಿಗೆ ಹಾವುಗಳಿಂದ ನೆಲದಲ್ಲಿ ವಾಸಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಹಾವಿನ ಭಯವು, ಹುಲಿಯ ಭಯಕ್ಕಿಂತ ಕಡಿಮೆಯೇನು ಇಲ್ಲ. ಅಂದ ಹಾಗೆ ಅವನು ವಿವಶವಾಗಿ, ಯಾವ ನೆಲದಲ್ಲಿ ಅವನು ಹಾವುಗಳನ್ನು ಕಂಡಿದ್ದನು. ಅವು ವಿಶೇಷವಾಗಿ ಅವನ ಹತ್ತಿರವೇ ಕಚ್ಚಲು ಬರುತ್ತಿದ್ದವು. ದೂರದ ನಗರಕ್ಕೆ ವಲಸೆ ಹೋಗಲು ಇಷ್ಟಪಟ್ಟನು"

ಆಥಮನು ನಂತರ ಅದರಲ್ಲಿ ಈ ಸುಳ್ಳು ಸೇರಿಸಿದನು. ಆ ಹಾವುಗಳು ತರಬೇತಿ ಪಡೆದದ್ದಾಗಿದ್ದವು. ಮತ್ತು ಜಮಾಅತಿನ ಜನರು ನನ್ನನ್ನು ಕಚ್ಚಲು ಬಿಟ್ಟಿದ್ದರು. ಅದಕ್ಕೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ಆಥಮ್ ಸಾಹೇಬರು ಆ ಹಾವುಗಳು ತರಬೇತಿ ಪಡೆದದ್ದಾಗಲಿ, ಅಥವಾ ಅವು ನಮ್ಮ ಕಡೆಯಿಂದ ಬಿಡುವುದಾಗಲಿ ಯಾವ ಸಾಕ್ಷ್ಯಗಳನ್ನು ಒದಗಿಸಿಲ್ಲ. ನಾವು ಸಾಮಾನ್ಯ ಹೇಳಿಕೆ ನೀಡಿದ್ದೇವೆ. ಆ ಹಾವು ಖಂಡಿತವಾಗಿಯೂ ಹೊರಗಿನಿಂದ ಬಂದದ್ದಲ್ಲ, ಬದಲು ಆಥಮ್ ಸಾಹಿಬರ ಭಾವನೆಗಳ ಕೂಸೇ ಆಗಿದೆ. (ಝಿಯಾವುಲ್ ಹಖ್, ರೂಹಾನಿ ಖಝಾಯಿನ್, ಸಂಪುಟ–9, ಪುಟ–262–263)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ಅಂದ ಹಾಗೆ ಆಥಮ್ ಸಾಹೇಬರ ಮನದಲ್ಲಿ ಭವಿಷ್ಯವಾಣಿಯ ಪ್ರಬಲ ಪ್ರಭಾವ ಬೀರಿ ಆಗಿತ್ತು. ಯಾವತ್ತೂ ಬಲವಾದ ಏನೋ ಒಂದು ಅವರ ದೃಷ್ಟಿಯ ಮುಂದೆ ತೇಲಾಡುತ್ತಿತ್ತು. ಆದುದರಿಂದ ಭಯಾನಕವಾದ ಸಾದೃಶ್ಯಗಳು ಅವರ ಕಣ್ಣು ಮುಂದೆ ಬರುವುದು ಸಹಜವಾಗಿತ್ತು.

ಅಂದ ಹಾಗೆ ಒಂದು ರಕ್ತಪಿಪಾಸಿ ಹಾವು ಕಂಡುಬಂದಿತು. ಅದನ್ನು ಅರೆಬಿಯಲ್ಲಿ ಹಯ್ಯ ಎನ್ನುತ್ತಾರೆ. ಏಕೆಂದರೆ ಹಾವು ಮನುಷ್ಯ ಕುಲಕ್ಕೆ ಪ್ರಥಮ ಮತ್ತು ಆರಂಭಿಕ ಶತ್ರುವಾಗಿದೆ. ಅದು ಸಹಜ ಪ್ರತಿಕ್ರಿಯೆ ಆಗಿದೆ. **ಹಯ್ಯ ಅಲಲ್ ಮೌತಿ**. ಅಂದರೆ ಸಾವಿನೆಡೆ ಬಾ. ಅದಕ್ಕಾಗಿಯೇ ಅದರ ಹೆಸರು ಹಯ್ಯ ಎಂದಾಯಿತು.

ಅಂದಹಾಗೆ ಹಾವು ಸಾವಿನ ಅವತಾರವಾಗಿದೆ. ಆದುದರಿಂದ ಆಥಮ್ ಸಾಹಿಬರಿಗೆ ಮೊದಲು ಅದನ್ನೇ ಕಂಡಿದ್ದಾರೆ. ಆಥವ್ ಸಾಹಿಬರು ನುರ್‌ಅಷ್ಕಾಂನಲ್ಲಿ ಅಳುತ್ತಾ ಅದನ್ನು ಒಪ್ಪಿಕೊಂಡಿದ್ದಾರೆ. ನಾನು ಸಾವಿನಿಂದ ಹೆದರಿಕೊಂಡಿದೆ. ಅಂದಹಾಗೆ ಇಂತಹ ಭಯಗ್ರಸ್ತನಿಗೆ ಹಾವು ಕಂಡುಬಂದರೆ ಅದರಲ್ಲಿ ವಿವೇಕವಂತರಿಗೆ ಆಶ್ಚರ್ಯವೇನಿದೆ. ಆದರೆ ಈ ಹಾವು ಅವರ ಭಾವನೆಗಳದ್ದೇ ಪರಿಣಾಮವಾಗಿತ್ತು. ಅದು ಭವಿಷ್ಯವಾಣಿ ಅವರ ತನುಮನದಲ್ಲಿ ಹೊಕ್ಕಿಯಾಗಿತ್ತು ಎಂಬುದಕ್ಕೆ ಸುಸ್ಪಷ್ಟ ಸಾಕ್ಷ್ಯವಾಗಿದೆ." (ಝಿಯಾಉಲ್ ಹಖ್, ರೂಹಾನಿ ಖಝಾಈನ್, ಸಂಪುಟ–9, ಪುಟ–263)

ರಕ್ತಪಿಪಾಸು ಹಾವಿನ ದೃಶ್ಯವನ್ನು ಆಥಮನು ಅಮೃತ್ಸರದ ತನ್ನ ಅರಮನೆಯಲ್ಲಿ ವಾಸಿಸುವಾಗಲೇ ಕಂಡದ್ದು. ಈ ದೃಶ್ಯದಿಂದ ಅವರು ಎಷ್ಟರಮಟ್ಟಿಗೆ ಭಯಗೊಂಡಿದ್ದರೆಂದರೆ, ಲೂಧಿಯಾನಕ್ಕೆ ತಮ್ಮ ಮಗಳು ಮತ್ತು ಅಳಿಯನ ಬಳಿಗೆ ಹೋದರು. ಲೂಧಿಯಾನದಲ್ಲಿ ಯಾವ ಘಟನೆ ಎದುರಾಗಿದೆ ನೋಡಿರಿ.

"ಆಥಮರು ಅಮೃತ್ಸರದಿಂದ ತರಬೇತಿಗೊಂಡ ಹಾವಿನ ಆಕ್ರಮಣದಿಂದ ಹೆದರಿ ಪಲಾಯನ ಮಾಡಿದರು, ಲೂದಿಯನದಲ್ಲಿ ತಮ್ಮ ಅಳಿಯನ ಆಶ್ರಯ ಪಡೆದುಕೊಂಡರು. ಇಲ್ಲಿಯೂ ಅದೇ ಭಯ, ಅದೇ ಸಾದೃಶ್ಯಗಳು ಆಥಮ್ ಸಾಹಿಬರ ಕಣ್ಣುಗಳ ಹಿಂದೆ ಬರುತ್ತಿದದವು. ಆದರೆ ಈ ಸಲ ಅವರಿಗೆ ಹಾವು ಕಾಣಲಿಲ್ಲ. ಬದಲು ಅದಕ್ಕಿಂತ ಹೆಚ್ಚು ಭಯಾನಕ ಸ್ಥಿತಿ ಉಂಟಾಯಿತು. ಅಂದರೆ ಕೆಲ ಶಸ್ತ್ರಧಾರಿ ಮನುಷ್ಯರು ಬರ್ಚಿಗಳೊಂದಿಗೆ ಕಂಡು ಬಂದವು. ಅವರ ಆವರಣದಲ್ಲಿಯೇ ಒಳ ಸಮೀಪಿಸಿ ಅವರನ್ನು ಕೊಲ್ಲಲು ಸಿದ್ಧರಿರುವಂತೆ ಕಾಣುತ್ತಿದ್ದವು. ನಮಗೆ ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಈ ಆಕ್ರಮಣದ ನಂತರ ಆಥಮ್ ಸಾಹಿಬರು ತಮ್ಮ ಅರಮನೆಯಲ್ಲಿ ತುಂಬಾ ಅಳುತ್ತಿದ್ದರು ಎಂದು. ಅವರು ಈ ಆಕ್ರಮಣ ಮನುಷ್ಯರು ಮಾಡಿದ್ದಾರೆ ಎನ್ನಲಿಲ್ಲ. ಬದಲು ಒಂದು ಅಗೋಚರ ಕೈವಾಡದ ಶಂಕೆ ಅವರಿಗೆ ಕಾಡುತ್ತಿತ್ತು. ಅವರ ಭಯ ಆತಂಕ ಹೆಚ್ಚಾಗುತ್ತಲೇ ಹೋಯಿತು. ಮನದ ಅಸಮಾಧಾನ ಅಶಾಂತಿ ಹೆಚ್ಚಾಗುತ್ತಲೇ ಹೋಯಿತು. ಎಷ್ಟರಮಟ್ಟಿಗೆ ಎಂದರೆ ಕ್ರೋಧಕ್ಕೆ ಈಡಾದ ಯಹೂದ್ಯರ ರೀತಿ ಕಾಲ್ಕೆಳಗಿನಿಂದ ನೆಲ ಜಾರುವಂತೆ ಭಯ ವ್ಯಕ್ತಪಡಿಸಿದರು. ಆ ಅರಮನೆ ಸಹ ಭಯಗ್ರಸ್ತವಾಗಿ ಕಂಡಿತು. ಅದು ಸಹಜವು ಆಗಿತ್ತು. ಏಕೆಂದರೆ ಯಾವ ಅರಮನೆಯಲ್ಲಿ ಆವರಣ ತುಂಬ ಶಸ್ತ್ರಧಾರಿ ಪೇದೆಗಳು ನುಸುಳಿ ಬಂದರು. ರಕ್ಷಣೆಗಿದ್ದ ಪೋಲೀಸರು ಯಾವ ರಕ್ಷಣೆಗೂ ಬಾರದಂತಾಯಿತು. ಅವರಿಗೆ, ಇವರು ಯಾರು, ಏಕೆ ಹೇಗೆ ಬಂದರೆಂಬುದೇ ತೋಚದಂತಾಯಿತು. ಹೀಗಿರುವಾಗ ಆಥಮ್ ಸಾಹಿಬರು ಈ ಭಯಾನಕವಾದ ಅರಮನೆಯಲ್ಲಿ ಇರಲು ಹೇಗೆ ಸಾಧ್ಯವಿತ್ತು. (ಝಿಯಾಉಲ್ ಹಖ್, ರೂಹಾನಿ ಖಝಾಈನ್, ಸಂಪುಟ–9, ಪುಟ–266)

**ಲೂಧಿಯಾನದಿಂದ ಪಲಾಯನಗೈದು ಇನ್ನೊಬ್ಬ ಅಳಿಯನ ಬಳಿ ಹೋದರು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಆಥಮ್ ಸಾಹಿಬ್ ಲೂಧಿಯಾನದಲ್ಲೂ ದೈವಿಕ ಶಸ್ತ್ರಧಾರಿಗಳನ್ನು ಕಂಡಾಗ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಈಗ ಖಿಲಾಫತ್ ಅಲ್ಲಾಹನು ನಿಶ್ಚಯಿಸಿದ ರೂಪದಲ್ಲಿಯೇ ಜಾರಿಯಲ್ಲಿರುವುದು**

**ಖಿಲಾಫತೆ ಅಹ್ಮದಿಯನ ಅನುಗ್ರಹಗಳಿಂದ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಮೇಲೆ ಕಳೆದ 113 ವರ್ಷಗಳಿಂದ ಅಲ್ಲಾಹನು ತೋರಿಸಿರುವ ತನ್ನ ಅನುಗ್ರಹಗಳ ದೃಶ್ಯಗಳ ಒಂದು ನೋಟ**

**ನಮ್ಮ ಪ್ರತಿಯೊಂದು ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಮಾತ್ರ ಪಡೆಯಲಿಕ್ಕಾಗಿ ಆಗುವಾಗಲೇ ನಾವು ಅಲ್ಲಾಹನನ್ನು ಮತ್ತು ಪ್ರವಾದಿಯನ್ನು ಅನುಸರಿಸುವವರಾಗುವೆವು. ಆಗಲೇ ಮನಸ್ಸಮಾಧಾನ ಮತ್ತು ನೆಮ್ಮದಿ ಲಭಿಸುವುದು.**

**ಯಾರು ನಿಷ್ಠಾವಂತರಾಗಿ ಖಿಲಾಫತಿಗೆ ವಿಧೇಯರಾಗಿ ಮತ್ತು ಅದನ್ನು ಅನುಸರಿಸುತ್ತಾ ಇರುತ್ತಾರೋ ಅವರೇ ಯಥಾರ್ಥ ರೀತಿಯಲ್ಲಿ ಖಿಲಾಫತಿನೊಂದಿಗೆ ನಿಷ್ಠೆಯ ಸಂಬಂಧವನ್ನು ಇರಿಸುವವರಾಗಿರುವರು. ಅವರೇ ಖಿಲಾಫತಿನ ಸಂರಕ್ಷಕರು ಹಾಗೂ ಖಿಲಾಫತ್ ಅವರನ್ನು ಸಹ ಸಂರಕ್ಷಿಸುವುದು. ಖಲೀಫತುಲ್ ಮಸೀಹ್‌ರ ದುಆ ಅವರೊಂದಿಗೆ ಇರುವುದು. ಅವರು ಕಷ್ಟತೆಗೆ ಒಳಪಡುವಾಗ ಖಲೀಫರು ಅವರಿಗೆ ದುಆ ಮಾಡುವರು. ಇಂತಹ ಸತ್ಕರ್ಮ ಮಾಡುವವರಿಗೆ ಖಿಲಾಫತಿನೊಂದಿಗೆ ಇರುವ ಸಂಬಂಧ ಅಲ್ಲಾಹನ ಸಂಪ್ರೀತಿಗೆ ಆಗಿರುವುದು.**

**ಯಾವುದರಲ್ಲಿ ಜಮಾಅತ್ ಮತ್ತು ಕಾಲಘಟ್ಟದ ಖಲೀಫರ ನಡುವೆ ಇರುವ ಸಂಬಂಧ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಇರುವುದೋ ಆ ಖಿಲಾಫತೇ ನೈಜವಾದ ಖಿಲಾಫತ್ ಆಗಿದೆ. ಈ ಖಿಲಾಫತೇ ಧರ್ಮದ ಸುದೃಢತೆ ಮತ್ತು ನೆಮ್ಮದಿಗೆ ಕಾರಣವಾಗಿರುತ್ತದೆ.**

**ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದರೊಂದಿಗೆ ಅಲ್ಲಾಹನ ಆಜ್ಞೆಗಳ ಪ್ರಕಾರ ನಾವು ನಡೆಯುತ್ತಿದ್ದೇವೆಯೇ ಎಂದು ಪ್ರತಿಯೊಂದು ಅಹ್ಮದಿ ಪ್ರತಿಯೊಂದು ಕ್ಷಣ ಅವಲೋಕಿಸಬೇಕು.**

**ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಯ ಪ್ರಕಾರ ಕಳೆದ 113 ವರ್ಷಗಳಿಂದ ಅಲ್ಲಾಹನ ಅನುಗ್ರಹಗಳು ಒಂದೊಂದಾಗಿ ಈಡೇರುವುದನ್ನು ನೋಡುತ್ತಿದ್ದೇವೆ.**

**ಪರಿಪೂರ್ಣ ಅನುಸರಣೆ ಮಾಡುವ ಬೈಅತ್ ಮಾತ್ರವೇ ಬೈಅತ್ ಆಗಿದೆ. ಖಲೀಫರ ಯಾವುದೇ ಒಂದು ಆಜ್ಞೆಯನ್ನೂ ಅನುಸರಿಸದೇ ಇರಬಾರದು. ಎಲ್ಲ ಸಂದರ್ಭದಲ್ಲೂ ಹಝ್ರತ್ ಮುಸ್ಲಿಹ್ ಮೌಊದ್(ರ) ಜಮಾಅತಿನ ಹಡಗನ್ನು ಅಲ್ಲಾಹನ ಸಹಾಯ ಮತ್ತು ನೆರವಿನೊಂದಿಗೆ ಯಶಸ್ಸಿನ ಮಜಲುಗಳ ತನಕ ತಲುಪಿಸಿದರು ಮತ್ತು ಸುರಕ್ಷಿತಗೊಳಿಸಿದರು.**

**ಅದಲ್ಲದೆ ಖಿಲಾಫತಿನೊಂದಿಗೆ ಸಂಬಂಧವನ್ನು ನೆಲೆನಿಲ್ಲಿಸಲು ಅಲ್ಲಾಹನು ಹೊಸ ಮಾರ್ಗವನ್ನು ನಮಗೆ ಮಾಡಿದ್ದಾನೆ. ಅದು ಈ ಕೋವಿಡಿನ ರೋಗದ ಕಾರಣದಿಂದ ಉಂಟಾಗಿವೆ. ಆನ್‌ಲೈನ್ ಮೀಟಿಂಗ್ ಅಥವಾ ವರ್ಚುವಲ್ ಮುಲಾಖತ್ ಮೂಲಕ ಮೀಟಿಂಗ್‌ಗಳು ಸಹ ನಡೆಯುತ್ತಿವೆ. ಅದರಿಂದ ನೇರವಾಗಿ ಜಮಾಅತಿನೊಂದಿಗೆ ಸಂಪರ್ಕ ನಡೆಯುತ್ತಿವೆ. ಖಲೀಫತುಲ್ ಮಸೀಹ್‌ರಿಂದ ನೇರವಾಗಿ ಮಾರ್ಗದರ್ಶನವನ್ನು ಜನರು ಪಡೆಯುತ್ತಿದ್ದಾರೆ. ನಾನು ಇಲ್ಲಿಂದ ಆಫ್ರಿಕದ ಯಾವುದಾದರೂ ದೇಶದೊಂದಿಗೆ, ಇಂಡೋನೇಶಿಯದೊಂದಿಗೆ, ಆಸ್ಟ್ರೇಲಿಯದೊಂದಿಗೆ, ಅಮೇರಿಕದೊಂದಿಗೆ ಸಂಪರ್ಕ ಸ್ಥಾಪಿಸುತ್ತಿದ್ದೇನೆ. ಇವೆಲ್ಲವೂ ಅಲ್ಲಾಹನ ಸಹಾಯಗಳ ದೃಶ್ಯಗಳಾಗಿವೆ.**

**ಅಲ್ಲಾಹನು ತನ್ನ ಅನುಗ್ರಹಗಳ ದೃಶ್ಯಗಳನ್ನು ತೋರಿಸಿದಕ್ಕೆ ನಮಗೆ ನೀಡಿದ ವರದಾನಗಳ ಹಕ್ಕುಗಳನ್ನು ನಾವು ಸದಾ ಈಡೇರಿಸುವವರಾಗಬೇಕು ಎಂಬುದನ್ನು ಎಂದಿಗೂ ಮರೆಯಬಾರದು. ಹಾಗಾದರೆ ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಯ ಪ್ರಕಾರ ನಾವು ಈ ಅನುಗ್ರಹದಿಂದ ಪ್ರಯೋಜನ ಪಡೆಯುತ್ತಿರುವೆವು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–05–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ-

اَلْحَمْدُ لِلّٰهِ رَبِّ الْعٰلَمِيْنَ- الرَّحْمٰنِ الرَّحِيْمِ- مٰلِكِ يَوْمِ الدِّيْنِ- إِيَّاكَ نَعْبُدُ وَإِيَّاكَ نَسْتَعِيْنُ-

اِهْدِنَا الصِّرَاطَ الْمُسْتَقِيْمَ- صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ-

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْأَرْضِ كَمَا اسْتَخْلَفَ الَّذِيْنَ مِنْ قَبْلِهِمْ ۪ وَلَيُمَكِّنَنَّ لَهُمْ دِيْنَهُمُ الَّذِي ارْتَضٰى لَهُمْ وَلَيُبَدِّلَنَّهُمْ مِّنْ بَعْدِ خَوْفِهِمْ أَمْنًا ؕ يَعْبُدُوْنَنِيْ لَا يُشْرِكُوْنَ بِيْ شَيْئًا ؕ وَمَنْ كَفَرَ بَعْدَ ذٰلِكَ فَأُولٰٓئِكَ هُمُ الْفٰسِقُوْنَ○ وَأَقِيْمُوا الصَّلٰوةَ وَاٰتُوا الزَّكٰوةَ وَأَطِيْعُوا الرَّسُوْلَ لَعَلَّكُمْ تُرْحَمُوْنَ○ (النور:56-57)

ಈ ವಚನಗಳ ಅರ್ಥ ಹೀಗಿವೆ: 'ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕೋಸ್ಕರ ನೀವು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ, ಝಕಾತ್ ನೀಡಿರಿ ಮತ್ತು ಪ್ರವಾದಿಗೆ ವಿಧೇಯರಾಗಿದ್ದುಕೊಳ್ಳಿರಿ.'

ಮೇ 27ರ ದಿನಾಂಕವನ್ನು ನಾವು ಖಿಲಾಫತ್ ದಿನವಾಗಿ ಆಚರಿಸುತ್ತೇವೆ. ಜಮಾಅತಿನ ಚರಿತ್ರೆಯು ಮತ್ತು ಖಿಲಾಫತಿಗೆ ಸಂಬಂಧಿಸಿ ನಮ್ಮ ಹೊಣೆಗಾರಿಕೆಗಳನ್ನು ಅರಿಯಲಿಕ್ಕಾಗಿ ಖಿಲಾಫತ್ ದಿನದಂದು ಜಮಾಅತಿನಲ್ಲಿ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತವೆ. ಅಲ್ಲಾಹನು ಕಳುಹಿಸಿದ ಸಂದೇಶವಾಹಕನನ್ನು ನಂಬುವ ಮತ್ತು ಖಿಲಾಫತಿಗೆ ಬೈಅತ್ ಅಥವಾ ಅನುಸರಣೆ ಪ್ರತಿಜ್ಞೆ ಮಾಡುವ ಸೌಭಾಗ್ಯವನ್ನು ನಮಗೆ ದಯಪಾಲಿಸುವುದರ ಮೂಲಕ ಅಲ್ಲಾಹನು ನಮ್ಮ ಮೇಲೆ ಬಹಳ ಹಿರಿದಾದ ಔದಾರ್ಯವನ್ನು ಮಾಡಿರುವನು.

ನಾನು ಪಾರಾಯಣ ಮಾಡಿರುವ ವಚನಗಳಲ್ಲಿ ಧರ್ಮದ ಸುದೃಢತೆ ಮತ್ತು ಭಯದ ಸ್ಥಿತಿಯನ್ನು ಸಮಾಧಾನದ ಸ್ಥಿತಿಗೆ ಪರಿವರ್ತನೆ ಮಾಡುವುದರ ಕುರಿತು ವಾಗ್ದಾನ ನೀಡಲಾಗಿದೆ. ಆದರೆ ದೃಢನಂಬಿಕೆ, ಸತ್ಕರ್ಮಗಳು, ಆರಾಧನೆಯ ಹಕ್ಕುಗಳನ್ನು ಈಡೇರಿಸುವುದು ಮತ್ತು ಶಿರ್ಕಿನಿಂದ ಸಂಪೂರ್ಣವಾಗಿ ಬಿಟ್ಟುನಿಲ್ಲುವುದು ಈ ವಾಗ್ದಾನದ ಈಡೇರಿಕೆಗೆ ಇರುವ ನಿಬಂಧನೆಗಳಾಗಿವೆ. ಈ ಸಂಗತಿಗಳನ್ನು ಪಡೆಯಲಿಕ್ಕಾಗಿ ನಮಾಝ್ ನಿರ್ವಹಿಸುವುದು, ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮತ್ತು ಪ್ರವಾದಿಯ ಅನುಸರಣೆ ಮಾಡುವುದು ಬಹಳ ಮುಖ್ಯ. ಆದ್ದರಿಂದ ನಾವು ಈ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡು ನಮ್ಮ ಜೀವಿತವನ್ನು ಅವುಗಳ ಪ್ರಕಾರ ನಡೆಸಿದರೆ, ಧರ್ಮಕ್ಕೆ ಭೌತಿಕ ಕಾರ್ಯಗಳಿಗಿಂತ ಪ್ರಾಮುಖ್ಯತೆ ನೀಡುತ್ತೇವೆ ಎಂಬ ವಾಗ್ದಾನದ ಪ್ರಕಾರ ಪ್ರಾಮಾಣಿಕವಾಗಿ ನಡೆಯಲು ಪ್ರಯತ್ನಿಸಿದರೆ ನಾವು ಖಿಲಾಫತಿನ ವರದಾನಗಳಿಂದ ಯಥಾರ್ಥವಾಗಿ ಪ್ರಯೋಜನ ಪಡೆಯುವವರಾಗುವೆವು. ಈ ವಚನದಲ್ಲಿ ಸತ್ಯವಿಶ್ವಾಸಿಗಳಿಗೆ ಸುವಾರ್ತೆಯೊಂದಿಗೆ ಚಿಂತನೀಯ ವಿಷಯವು ಇದೆ. ಏಕೆಂದರೆ, ಈ ನಿಬಂಧನೆಗಳನ್ನು ಈಡೇರಿಸದಿದ್ದರೆ ಖಿಲಾಫತಿನ ಅನುಗ್ರಹಗಳಿಂದ ಸರಿಯಾಗಿ ಪ್ರಯೋಜನ ಪಡೆಯಲು ಸಾಧ್ಯವಲ್ಲ. ನಮಾಝ್, ಝಕಾತ್, ಅಲ್ಲಾಹನಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ನೆರವೇರಿಸದಿದ್ದರೆ ನಾವು ಅಲ್ಲಾಹನ ಕೃಪೆ ಮತ್ತು ಅನುಗ್ರಹಗಳನ್ನು ಪಡೆಯುವವರಾಗದು. ಆದ್ದರಿಂದ ಚರಿತ್ರೆಯನ್ನು ಅರಿಯುವುದು ಮತ್ತು ಖಿಲಾಫತ್ ದಿನವನ್ನು ಆಚರಿಸುವುದು ಸಾಕಾಗಲ್ಲ.

ಎಲ್ಲಿಯ ವರೆಗೆ ನಾವು ಯಥಾರ್ಥ ಆರಾಧಕನಾಗುವುದಿಲ್ಲವೋ, ಎಲ್ಲಿಯ ವರೆಗೆ ನಾವು ನಮ್ಮ ನಮಾಝುನ್ನು ಸಂರಕ್ಷಿಸುವುದಿಲ್ಲವೋ, ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ನೆರವೇರಿಸುವುದಿಲ್ಲವೋ ಅಲ್ಲಿಯ ವರೆಗೆ ಖಿಲಾಫತ್ ದಿನವನ್ನು ಆಚರಿಸುವುದರಿಂದ ಯಾವುದೇ ಪ್ರಂಯೋಜನವಿಲ್ಲ. ನಮ್ಮ ವಿಶ್ವಾಸದ ಸ್ಥಿತಿಯೇನೆಂದು ನಾವು ಅವಲೋಕಿಸಬೇಕಾಗಿದೆ. ನಮ್ಮಲ್ಲಿ ಅಲ್ಲಾಹನ ಭಯವಿದೆಯೇ? ದೇವಭಕ್ತಿಯ ಸೂಕ್ಷ್ಮ ಮಾರ್ಗಗಳಲ್ಲಿ ಚಲಿಸುತ್ತಿದ್ದೆವೆಯೇ? ನಾವು ಅಲ್ಲಾಹನನ್ನು ಎಲ್ಲ ವಸ್ತುಗಳಿಗಿಂತ ಹೆಚ್ಚು ಪ್ರೀತಿಸುತ್ತಿದ್ದೇವೆಯೇ? ನಾವು ಅಲ್ಲಾಹನ ಮತ್ತು ಅವನ ಪೈಗಂಬರರನ್ನು(ಸ) ಪರಿಪೂರ್ಣವಾಗಿ ಅನುಸರಿಸುತ್ತಿದ್ದೇವೆಯೇ? ಎಂದು ಅವಲೋಕಿಸಬೇಕಾಗಿದೆ. ಅನಂತರ ನಮ್ಮ ದೃಷ್ಟಿ ನಮ್ಮ ಕೃತ್ಯಗಳ ಕಡೆಗೆ ಹೋಗಬೇಕು. ನಮ್ಮ ಪ್ರತಿಯೊಂದು ಕೃತ್ಯಗಳು ಇಸ್ಲಾಮಿನ ನೈಜ ಶಿಕ್ಷಣದ ಪ್ರಕಾರ ಇವೆಯೇ? ನಮ್ಮ ಕೃತ್ಯಗಳು ತೋರಿಕೆಗೆ ಆಗಿವೆಯೇ? ನಮ್ಮ ನಮಾಝ್‌ಗಳು ತೋರಿಕೆಗೆ ಆಗಿವೆಯೇ? ನಮ್ಮ ದಾನಧರ್ಮ, ಝಕಾತ್ ನೀಡುವಿಕೆ ತೋರಿಕೆಗೆ ಆಗಿವೆಯೇ? ನಮ್ಮ ಉಪವಾಸ ತೋರಿಕೆಗೆ ಆಗಿವೆಯೇ? ನಾವು ಹಾಜಿಯೆಂದು ಕರೆಯಲ್ಪಡಲು ಹಜ್ಜ್ ಮಾಡುತ್ತಿದ್ದೇವೆಯೇ? ಎಂದೆಲ್ಲ ನೋಡಬೇಕಾಗಿದೆ. ನಮ್ಮ ಪ್ರತಿಯೊಂದು ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಮಾತ್ರ ಪಡೆಯಲಿಕ್ಕಾಗಿ ಆಗುವಾಗಲೇ ನಾವು ಅಲ್ಲಾಹನನ್ನು ಮತ್ತು ಪ್ರವಾದಿಯನ್ನು ಅನುಸರಿಸುವವರಾಗುವೆವು. ಆಗಲೇ ಮನಸ್ಸಮಾಧಾನ ಮತ್ತು ನೆಮ್ಮದಿ ಲಭಿಸುವುದು. ಆಗಲೇ ಆ ಸಮಾಜ ಖಿಲಾಫತಿನ ನೆರಳಲ್ಲಿ ನೆಲೆನಿಲ್ಲುವುದು. ಆಗಲೇ ನಮ್ಮ ಪ್ರತಿಯೊಂದು ಕೃತ್ಯಗಳು ಅಲ್ಲಾಹನಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳಾಗುವುದು. ಆದ್ದರಿಂದ ಕೇವಲ ಬಾಯಿಮಾತಲ್ಲ, ಬದಲಾಗಿ ಸತ್ಯವಿಶ್ವಾಸಿಗಳು ಮತ್ತು ಸತ್ಕರ್ಮ ಮಾಡುವವರು ಖಿಲಾಫತಿನಿಂದ ಪ್ರಯೋಜನ ಪಡೆಯುವರು ಎಂಬ ಅಲ್ಲಾಹನ ನಿರ್ದೇಶನ ಸದಾ ಮುಂದಿರಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ವಿಶ್ವಾಸದೊಂದಿಗೆ ಸತ್ಕರ್ಮವನ್ನು ಸಹ ಇರಿಸಿದ್ದಾನೆ. ಒಂದು ಕಣದಷ್ಟೂ ಕೆಡುಕಿಲ್ಲದ ಕೃತ್ಯವನ್ನು ಸತ್ಕರ್ಮವೆಂದು ಹೇಳಲಾಗುತ್ತದೆ. ನೆನಪಿಡಿರಿ, ಮನುಷ್ಯನ ಕೃತ್ಯಗಳನ್ನು ಕದಿಯಲು ಯಾವಾಗಲೂ ಕಳ್ಳನು ಬರುತ್ತಿರುತ್ತಾನೆ. ಅವು ಯಾವುವೂ? ಅವನು ಯಾರು? ಅದು ತೋರಿಕೆ, ಎಂದರೆ, ಮನುಷ್ಯನು ತೋರಿಕೆಗಾಗಿ ಸತ್ಕರ್ಮ ಮಾಡುತ್ತಾನೆ. ಅಹಂಭಾವ, ಎಂದರೆ ಏನಾದರೂ ಸತ್ಕರ್ಮ ಮಾಡಿದರೆ, ಬಹಳ ದೊಡ್ಡ ಒಳಿತು ಮಾಡಿದ್ದೇನೆ ಎಂದು ಖುಶಿಪಡುತ್ತಾನೆ. ವಿವಿಧ ರೀತಿಯ ದುಷ್ಕೃತ್ಯಗಳೇ ಆ ಕಳ್ಳರು. ಅವುಗಳನ್ನು ಮಾಡುತ್ತಿದ್ದೇನೆ ಎಂದು ಕೂಡ ಕೆಲವೊಮ್ಮೆ ಮನುಷ್ಯನಿಗೆ ಗೊತ್ತಿರುವುದಿಲ್ಲ. ಇವೆಲ್ಲವೂ ಪಾಪಗಳಾಗಿವೆ. ಇದರಿಂದ ಸತ್ಕರ್ಮಗಳು ವ್ಯರ್ಥವಾಗುತ್ತವೆ. ದೌರ್ಜನ್ಯ, ಅಹಂಭಾವ, ತೋರಿಕೆ, ಅಹಂಕಾರ ಮತ್ತು ಮನುಷ್ಯರ ಹಕ್ಕುಗಳನ್ನು ದೋಚುವ ಯೋಚನೆ ಕೂಡ ಬರದ ಕೃತ್ಯವನ್ನು ಸತ್ಕರ್ಮ ಎನ್ನಲಾಗುತ್ತದೆ. ಸತ್ಕರ್ಮ ಮಾಡುವ ಒಬ್ಬನೇ ಒಬ್ಬ ವ್ಯಕ್ತಿ ಮನೆಯಲ್ಲಿದ್ದರೆ, ಮನೆಯಲ್ಲಿರುವವರೆಲ್ಲ ಸುರಕ್ಷಿತವಾಗಿರುವರು. ಆದ್ದರಿಂದ ಸತ್ಯವಿಶ್ವಾಸದೊಂದಿಗೆ ಸತ್ಕರ್ಮ ಮಾಡುವುದು ಬಹಳ ಮುಖ್ಯ. (ಮಲ್‌ಫೂಝಾತ್, ಸಂಪುಟ–4, ಪುಟ–274–275)

ಹೀಗಾಗಿ ವಿಶ್ವಾಸದೊಂದಿಗೆ ಸತಕರ್ಮಗಳು ಅತ್ಯವಶ್ಯಕವಾಗಿದೆ. ಮತ್ತೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾವು ಸ್ವತಃ ಸತ್ಕರ್ಮವೆಂದು ಭಾವಿಸುವ ಮತ್ತು ನಿಶ್ಚಯಿಸುವ ಸಂಗತಿಗಳನ್ನು ಸತ್ಕರ್ಮವೆಂದು ಎನ್ನಲಾಗದು. ಒಳಿತು ಎಂಬುದು ಕೆಡುಕಿನ ವಿರೋಧ ಪದವಾಗಿದೆ. ಉದಾಹರಣೆಗೆ, ಕೆಟ್ಟು ಹೋಗಿರದ, ಕೆಳಮಟ್ಟದ ಪದಾರ್ಥಗಳಿಂದ ಮಾಡಿರದ, ಬೇಗನೆ ದಹಿಸುವ, ಯಾವುದೇ ರೀತಿಯ ಕೊರತೆಗಳಿಲ್ಲದ ಆಹಾರವನ್ನು ಪರಿಶುದ್ಧ ಆಹಾರವೆಂದು ಹೇಳಲಾಗುತ್ತದೆ. ಅದೇ ರೀತಿಯಲ್ಲಿ ಸತ್ಕರ್ಮಗಳಲ್ಲೂ ಯಾವುದೇ ರೀತಿಯ ಕೆಡುಕಿರಬಾರದು. ಎಂದರೆ ಅಲ್ಲಾಹನ ಆಜ್ಞೆಗಳ ಮತ್ತು ಹಝ್ರತ್ ಪೈಗಂಬರರ(ಸ) ಸುನ್ನತ್ ಪ್ರಕಾರವಾಗಿರಬೇಕು. ಅದೇ ರೀತಿಯಲ್ಲಿ ಅದರಲ್ಲಿ ಯಾವುದೇ ರೀತಿಯ ಆಲಸ್ಯ ಅಥವಾ ಸೋಮಾರಿತನವಿರಬಾರದು. ಅದರಲ್ಲಿ ತೋರಿಕೆ, ಅಹಂಭಾವ, ಸ್ವಂತ ಇಷ್ಟವಿರಬಾರದು. ಸತ್ಕರ್ಮವೇನೆಂದೂ ಸರಿಯಾದ ತೀರ್ಮಾನವೇನೆಂದೂ ಸ್ವತಃ ವ್ಯಾಖ್ಯಾನಿಸಬಾರದು. ಹಾಗಾದರೆ ಮಾತ್ರ ಅದು ಸತ್ಕರ್ಮವಾಗುವುದು. ಸ್ವತಃ ತಮ್ಮ ಕಡೆಯಿಂದ ಯಾವುದೇ ವ್ಯಾಖ್ಯಾನಗಳನ್ನು ಮಾಡಬೇಡಿರಿ, ಸ್ವತಃ ಇದರ ಅರ್ಥ ಇದು ಅದರ ಅದರ ಅರ್ಥ ಅದು ಎಂದು ಹೇಳಬೇಡಿರೀ ಬದಲಿಗೆ ಅಲ್ಲಾಹ್ ಮತ್ತು ಅಲ್ಲಹನ ರಸೂಲರ ಆಜ್ಞೆಗಳನ್ನು ಪಾಲಿಸಿದರೆ ಮಾತ್ರ ಅದು ಸತ್ಕರ್ಮವಾಗುವುದು.
(ಮಲ್‌ಫೂಝಾತ್ ಸಂಪುಟ–6, ಪುಟ–425–426)

ಇದು ಬಹಳ ಮಹತ್ವದ ವಿಷಯವಾಗಿದೆ. ಈ ಸಂಗತಿಯನ್ನು ನೀವು ಪಡೆದುಕೊಂಡರೆ ನೀವು ಅಲ್ಲಾಹನ ಅನುಗ್ರಹಗಳಿಂದ ಪ್ರಯೋಜನ ಪಡೆದುಕೊಂಡಿದ್ದೀರಿ ಎಂದರ್ಥ. ಅದೇ ರೀತಿ ಖಿಲಾಫತೆ ಅಹ್ಮದಿಯವನ್ನು ಖಾಎಮ್‌ಗೊಳಿಸುವೆವು ಎಂದು ಮಾಡಿರುವಂತಹ ಪ್ರತಿಜ್ಞೆಯನ್ನು ಸಹ ಪೂರ್ಣಗೊಳಿಸುವವರಾಗುವರು. ಅವರಿಗೆ ತಮ್ಮ ಸ್ವಂತ ಇಷ್ಟದ ಎದುರಾದರೆ ಅವರು ಸತ್ಕರ್ಮಗಳ ವ್ಯಾಖ್ಯಾನಗಳನ್ನು ಸ್ವತಃ ಮಾಡುವವರಲ್ಲ. ಖಿಲಾಫತಿನೊಂದಿಗೆ ಸಂಬಂಧವಿದೆ ಎಂದು ಹೇಳುವ ಇಂತಹ ಜನರ ಘೋಷಣೆಗಳು ಯಾವುದೇ ಪ್ರಯೋಜನಕ್ಕೆ ಬರದು. ಯಾರು ನಿಷ್ಠಾವಂತರಾಗಿ ಖಿಲಾಫತಿಗೆ ವಿಧೇಯರಾಗಿ ಮತ್ತು ಅದನ್ನು ಅನುಸರಿಸುತ್ತಾ ಇರುತ್ತಾರೋ ಅವರೇ ಯಥಾರ್ಥ ರೀತಿಯಲ್ಲಿ ಖಿಲಾಫತಿನೊಂದಿಗೆ ನಿಷ್ಠೆಯ ಸಂಬಂಧವನ್ನು ಇರಿಸುವವರಾಗಿರುವರು. ಅವರೇ ಖಿಲಾಫತಿನ ಸಂರಕ್ಷಕರು ಹಾಗೂ ಖಿಲಾಫತ್ ಅವರನ್ನು ಸಹ ಸಂರಕ್ಷಿಸುವುದು. ಖಲೀಫತುಲ್ ಮಸೀಹ್‌ರ ದುಆ ಅವರೊಂದಿಗೆ ಇರುವುದು. ಅವರು ಕಷ್ಟತೆಗೆ ಒಳಪಡುವಾಗ ಖಲೀಫರು ಅವರಿಗೆ ದುಆ ಮಾಡುವರು. ಇಂತಹ ಸತ್ಕರ್ಮ ಮಾಡುವವರಿಗೆ ಖಿಲಾಫತಿನೊಂದಿಗೆ ಇರುವ ಸಂಬಂಧ ಅಲ್ಲಾಹನ ಸಂಪ್ರೀತಿಗೆ ಆಗಿರುವುದು.

ಒಟ್ಟಿನಲ್ಲಿ, ಯಾವುದರಲ್ಲಿ ಜಮಾಅತ್ ಮತ್ತು ಕಾಲಘಟ್ಟದ ಖಲೀಫರ ನಡುವೆ ಇರುವ ಸಂಬಂಧ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಇರುವುದೋ ಆ ಖಿಲಾಫತೇ ನೈಜವಾದ ಖಿಲಾಫತ್ ಆಗಿದೆ. ಈ ಖಿಲಾಫತೇ ಧರ್ಮದ ಸುದೃಢತೆ ಮತ್ತು ನೆಮ್ಮದಿಗೆ ಕಾರಣವಾಗಿರುತ್ತದೆ. ಭೌತಿಕವಾದ ಉಪಾಯಗಳಿಂದ ಮತ್ತು ಪ್ರಯತ್ನಗಳಿಂದ ಖಿಲಾಫತನ್ನು ಸ್ಥಾಪಿಸಲು ಬಯಸುವ ಇತರ ಮುಸ್ಲಿಮರಿಗೆ ಅವರ ಉಪಾಯಗಳು ಮತ್ತು ಯೋಜನೆಗಳು ಯಾವುದೇ ಪ್ರಯೋಜನವನ್ನು ನೀಡದು. ಅವರು ಎಷ್ಟೇ ಪ್ರಯತ್ನಿಸುವರಾದರೂ ಅಲ್ಲಾಹನು ತೀರ್ಮಾನಿಸಿದ ರೀತಿಯಲ್ಲೇ ಈಗ ಖಿಲಾಫತ್ ಜಾರಿಯಲ್ಲಿರುವುದು. ಆದ್ದರಿಂದ ನಮಗೆ ಖಿಲಾಫತಿನ ಅನುಗ್ರಹ ಲಭಿಸಿರುವುದಕ್ಕಾಗಿ ಕೃತಜ್ಞತೆ ಅರ್ಪಿಸುವುದು ಮತ್ತು ಅಲ್ಲಾಹನ ಮುಂದೆ ಬಾಗುವುದರೊಂದಿಗೆ ಅಲ್ಲಾಹನ ಭಯವನ್ನು ಹೃದಯದಲ್ಲಿ ಇರಿಸುಕೊಂಡು ನಮ್ಮ ಕೃತ್ಯಗಳ ಕಡೆಗೆ ಸದಾ ದೃಷ್ಟಿಯಿರಬೇಕು. ಅವುಗಳು ಅಲ್ಲಾಹನು ಮತ್ತು ಪ್ರವಾದಿಯ ಆದೇಶಗಳ ಪ್ರಕಾರವಾಗಿವೆಯೇ? ಅಲ್ಲಾಹನಿಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳ ಮಟ್ಟ ಅಲ್ಲಾಹನು ಹೇಳಿದ ಪ್ರಕಾರವಿದೆಯೇ? ಎಂದು ನೋಡಬೇಕು.

ಆದ್ದರಿಂದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದರೊಂದಿಗೆ ಅಲ್ಲಾಹನ ಆಜ್ಞೆಗಳ ಪ್ರಕಾರ ನಾವು ನಡೆಯುತ್ತಿದ್ದೇವೆಯೇ ಎಂದು ಪ್ರತಿಯೊಂದು ಅಹ್ಮದಿ ಪ್ರತಿಯೊಂದು ಕ್ಷಣ ಅವಲೋಕಿಸಬೇಕು. ನಾವು ಈ ಯೋಚನೆಯೊಂದಿಗೆ ಜೀವನವನ್ನು ಸಾಗಿಸುವಾಗ ಮತ್ತು ನಮ್ಮ ಕೃತ್ಯಗಳನ್ನು ಅವುಗಳ ಪ್ರಕಾರ ಮಾಡುವಾಗ ಮತ್ತು ಖಿಲಾಫತ್ ನೆಲೆನಿಲ್ಲಲು ದುಆ ಸಹ ಮಾಡುವಾಗ ನಾವು ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುತ್ತಾ ಹೋಗುವೆವು. ಖಿಲಾಫತ್ ವ್ಯವಸ್ಥೆ ಜಾರಿಯಲ್ಲಿರುವುದು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ಅಲ್ಲಾಹನು ಸಹ ಹಝ್ರತ್ ಮಸೀಹ್ ಮೌಊದ್‌ರೊಡನೆ(ಅ) ಹೀಗೆ ಹೇಳಿ ಸಾಂತ್ವನ ನೀಡಿದ್ದಾನೆ. ನಾವು ಈ ನಿಬಂಧನೆಗಳನ್ನು ಪಾಲಿಸುವವರಾದರೆ, ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ನೀಡಿದ್ದ ಸುವಾರ್ತೆಗಳು ಈಡೇರುವುವು.

“ಅಲ್‌ವಸಿಯ್ಯತ್” ಎಂಬ ಕಿರುಹೊತ್ತಿಗೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಖಿಲಾಫತ್ ವ್ಯವಸ್ಥೆಯ ಕುರಿತು ಬಹಳ ವಿಶದವಾಗಿ ಪ್ರಸ್ತಾಪಿಸಿರುವರು. ಅವರು ಹೇಳುತ್ತಾರೆ: ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಸಹಾಯ ಮಾಡುವುದು ಮತ್ತು ಅವರಿಗೆ ವಿಜಯ

ನೀಡುವುದು ಅಲ್ಲಾಹನ ಸುನ್ನತ್ ಅಥವಾ ರೀತಿಯಾಗಿದೆ. ಮನುಷ್ಯನನ್ನು ಭೂಮಿಯಲ್ಲಿ ಸೃಷ್ಟಿಸಿದ ಅಂದಿನಿಂದ ಅಲ್ಲಾಹನು ಈ ಸುನ್ನತನ್ನು ಪ್ರಕಟಿಸುತ್ತಿದ್ದಾನೆ. ಅವರು ಇದರ ಬಗ್ಗೆ ಹೀಗೆ ಹೇಳಿದ್ದಾನೆ: **ಕತಬಲ್ಲಾಹು ಅಗ್‌ಲಿಬನ್ನ ಅನ ವ ರುಸುಲಿ**. ಎಂದರೆ ಅಲ್ಲಾಹನು ಮತ್ತು ಅಲ್ಲಾಹನು ಪ್ರವಾದಿಗಳು ಖಂಡಿತ ವಿಜಯ ಹೊಂದುವರು. ಎಂದರೆ ಅಲ್ಲಾಹನು ಶಕ್ತಿಶಾಲಿಯಾದ ದೃಷ್ಟಾಂತಗಳೊಂದಿಗೆ ಪ್ರವಾದಿಗಳ ಸತ್ಯತೆಯನ್ನು ಪ್ರಕಟಿಸುತ್ತಾನೆ. ಯಾವ ಒಳಿತನ್ನು ಲೋಕದಲ್ಲಿ ಹರಡಲು ಅಲ್ಲಾಹನು ಬಯಸುತ್ತಾನೋ ಅದರ ಬೀಜ ಬಿತ್ತುವಿಕೆಯನ್ನು ಪ್ರವಾದಿಗಳ ಮೂಲಕ ಅವನು ಮಾಡಿಸುತ್ತಾನೆ. ಆದರೆ ಅದರ ಪರಿಪೂರ್ಣತೆ ಅವರ ಕೈಗಳಿಂದ ಮಾಡಿಸುವುದಿಲ್ಲ. ಬದಲಾಗಿ ಅದು ಅಪೂರ್ಣವಾಗಿರುವಾಗಲೇ ಅವರಿಗೆ ಮರಣವನ್ನು ನೀಡುತ್ತಾನೆ. ಹೀಗೆ ಅದು ವಿಫಲಗೊಂಡಿದೆ ಎಂಬ ಭಯದ ಭಾವನೆ ಉಂಟಾಗುತ್ತದೆ. ವಿರೋಧಿಗಳಿಗೆ ನಗಾಡಲು, ಗೇಲಿಮಾಡಲು, ಮೂದಲಿಸಲು, ದೂಷಿಸಲು ಮತ್ತು ಛೇಡಿಸಲು ಸಮಯವನ್ನು ನೀಡುತ್ತಾನೆ. ಅವರು ಅಪಹಾಸ್ಯ ಮತ್ತು ಗೇಲಿ ಮಾಡಿದ ನಂತರ ಅಲ್ಲಾಹನು ತನ್ನ ಶಕ್ತಿಪ್ರತಾಪದ ಮತ್ತೊಂದು ಕೈಯನ್ನು ತೋರಿಸುತ್ತಾನೆ. ಅಲ್ಪ-ಸ್ವಲ್ಪ ಅಪೂರ್ಣಗೊಂಡಿದ್ದ ಉದ್ದೇಶಗಳನ್ನು ಮತ್ತು ನಿರ್ಧಾರಗಳನ್ನು ಪರಿಪೂರ್ಣಗೊಳಿಸಲು ಮಾರ್ಗಗಳನ್ನು ಉಂಟುಮಾಡುತ್ತಾನೆ.
(ಅಲ್‌ವಸಿಯ್ಯತ್, ರೂಹಾನಿ ಖಝಾಇನ್ ಸಂಪುಟ-20, ಪುಟ-304-305)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮರಣವು ಪ್ರತಿಯೊಂದು ಅಹ್ಮದಿಯನ್ನು ನಡುಗಿಸಿತು. ಅದೇ ವೇಳೆ ವಿರೋಧಿಗಳು ಖುಶಿಯಿಂದ ಸಂತೋಷವಾದ್ಯವನ್ನು ಬಾರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನರಾದಾಗ ಎಂತಹ ಕೆಟ್ಟಮಾತುಗಳನ್ನು ವಿರೋಧಿಗಳು ಹೇಳಿದರೆಂದರೆ, ಅವುಗಳನ್ನು ಕೇಳುವಾಗ ನಾಚಿಕೆಯಾಗುತ್ತದೆ. ಅಲ್ಲಾಹನು ಮತ್ತು ಪ್ರವಾದಿಯ ಹೆಸರು ಹೇಳುವವರು ಇಷ್ಟು ಕೀಳುಮಟ್ಟಕ್ಕೆ ಬೀಳುವುದನ್ನು ನೋಡುವಾಗ ಅಚ್ಚರಿಯಾಗುತ್ತದೆ. ಆ ವ್ಯರ್ಥಮಾತುಗಳನ್ನು ಪ್ರಸ್ತಾಪಿಸುವ ಆವಶ್ಯಕತೆಯಿಲ್ಲ. ಆದರೆ ಜಮಾಅತ್ ಅವ್ಯವಸ್ಥೆಗೊಂಡಿರುವುದಾಗಿ ಮತ್ತು ಅಹ್ಮದಿಯ್ಯತ್ತನ್ನು ಅಹ್ಮದಿಯರು ಬಿಟ್ಟಿರುವುದಾಗಿ ವಿರೋಧಿಗಳು ಹರಡಿದ ಸುಳ್ಳು ವಾರ್ತೆಗಳ ಬಗ್ಗೆ ಪ್ರಸ್ತಾಪಿಸುವೆನು. ಪೀರ್ ಜಮಾಅತಿನ ಅಲಿಶಾಹರ ಶಿಷ್ಯರು ಹೇಳಿದರು: ಮಿರ್ಝಾಯಿಗಳು ಪಶ್ಚಾತ್ತಾಪ ಮಾಡುತ್ತಾ ಇಸ್ಲಾಮಿಗೆ ಮರಳುತ್ತಿದ್ದಾರೆ. (ತಾರೀಖೇ ಅಹ್ಮದಿಯ್ಯತ್, ಸಂಪುಟ-3, ಪುಟ-204)

ಅಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ನಿಧನದ ನಂತರ ಅಹ್ಮದಿಯ್ಯತ್‌ನಿಂದ ಪಶ್ಚಾತ್ತಾಪ(ತೌಬ) ಮಾಡುತ್ತ ಈಗ ಅವರಲ್ಲಿ ಸೇರುತ್ತಿದ್ದಾರೆ. ಖ್ವಾಜಾ ಹಸನ್ ನಿಝಾಮಿ ಸಾಹಿಬ್‌ರು ಅಹ್ಮದಿಯರಿಗೆ ಹೀಗೆ ಸಲಹೆ ನೀಡುತ್ತಾರೆ: 'ಮಿರ್ಝಾ ಸಾಹಿಬ್ ನಿಧನರಾಗಿರುವರು. ಈಗ ನಿಮ್ಮನ್ನು ನೋಡುವವರು ಯಾರೂ ಇಲ್ಲ. ಆದ್ದರಿಂದ ಅಹ್ಮದಿಯ್ಯತ್ ಉಪೇಕ್ಷಿಸಿರಿ ಮತ್ತು ನಮ್ಮೊಂದಿಗೆ ಬಂದುಸೇರಿರಿ.' (ತಾರೀಖೆ ಅಹ್ಮದೀಂಯ್ಯತ್, ಸಂಪುಟ-3, ಪುಟ-206)

ರಾಜಕೀಯ ನಿಟ್ಟಿನಲ್ಲಿ ಅವರು ಬಹಳ ಮೃಧುವಾಗಿ ಈ ಸಲಹೆ ನೀಡುತ್ತಿದ್ದರು. ಇವರು ನೋಡಲಿಕ್ಕೆ ಬಹಳ ಗಂಭೀರ ಸ್ವಭಾವದವರಾಗಿದ್ದರು. ಖ್ವಾಜ ಹಸನ್ ನಿಝಾಮಿ ಅವರು ಅಹ್ಮದಿಯರನ್ನು ಸಲಹೆಗಳನ್ನು ನೀಡುತ್ತ ಹೇಳುತ್ತಾರೆ ಮಿರ್ಝಾ ಸಾಹೆಬರ ಮಸೀಹಿಯ್ಯತ್ ಹಾಗೂ ಮಹದಿಯ್ಯತ್ ದಾವೆಗಳಿಂದ ಅಹ್ಮದಿಯರು ನಿರಾಕರಿಸಬೇಕು ಇಲ್ಲದಿದ್ದರೆ ಮಿರ್ಝಾ ಸಾಹೆಬರಂತೆ ಬುದ್ಧಿವಂತ ಹಾಗೂ ಉತ್ತಮ ವ್ಯವಸ್ಥಾಪಕರ ಅನುಪಸ್ಥಿತಿಯ ಕಾರಣ ಅಹ್ಮದಿಯರು ವಿರೋಧಿಗಳ ಗಲಾಟೆಗಳನ್ನು ಸಹಿಸಲು ಸಾಧ್ಯವಿಲ್ಲ ಮತ್ತು ಅವರ ವ್ಯವಸ್ಥೆಯು ಮುರಿದುಹೋಗುವುದು. (ತಾರೀಖೇ ಅಹ್ಮದಿಯ್ಯತ್, ಸಂಪುಟ-3, ಪುಟ-206)

**"ನಾನು ನಿನ್ನೊಂದಿಗೆ ಮತ್ತು ನಿನ್ನ ಪ್ರಿಯರೊಂದಿಗೆ ಇದ್ದೇನೆ"** ಎಂದು ಅಲ್ಲಾಹನು ದಿವ್ಯವಾಣಿ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಹೇಳಿದ್ದು ಈ ವಿರೋಧಿಗಳಿಗೆ ಗೊತ್ತಿಲ್ಲ. ಇತರ ಪ್ರವಾದಿಗಳ ಮರಣದ ನಂತರ ಇದ್ದ ಹಾಗೆಯೇ ಅವರ ನಂತರವೂ ಖಿಲಾಫತಿನ ಪರಂಪರೆ ಶುರುವಾಗುವುದಾಗಿ ಹೇಳಿಕೊಂಡು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸಾಂತ್ವನ ಪಡಿಸಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಬಿಯೆಂದು ಹೇಳುವುದರಿಂದ ಹಿಂಜರಿಕೆ ತೋರಿಸುವ ಕೆಲವು ದುರ್ಬಲ ಅಹ್ಮದಿಯರಿಗೂ ಇದರಲ್ಲಿ ಉತ್ತರವಿದೆ. ಏಕೆಂದರೆ, ನನ್ನ ಜಮಾಅತ್ ನಬಿಯ ಜಮಾಅತಾಗಿದೆ ಮತ್ತು ನಾನು ನಬಿಯಾಗಿದ್ದೇನೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಇಲ್ಲಿ ಸ್ವತಃ ಹೇಳಿರುವರು. ಎರಡನೇ ಶಕ್ತಿಪ್ರಭಾವವಾದ ಖಿಲಾಫತ್ ಜಾರಿಯಾಗುವುದರ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಎರಡು ವಿಧಗಳ ಶಕ್ತಿ ಪ್ರಭಾವಗಳನ್ನು ಪ್ರಕಟಿಸುತ್ತಾನೆ. ಮೊದಲು ಅವನು ಪ್ರವಾದಿಗಳು ಮುಖಾಂತರ ತನ್ನ ಶಕ್ತಿಪ್ರಭಾವವನ್ನು ಪ್ರಕಟಿಸುತ್ತಾನೆ. ಎರಡನೆಯದಾಗಿ, ಪ್ರವಾದಿಯ ಮರಣದ ನಂತರ ಕಷ್ಟತೆಗಳು ಉಂಟಾಗುವಾಗ, ಎಲ್ಲವು ಮುಕ್ತಾಯವಾಯಿತು ಎಂದು ಶತ್ರುಗಳು ಭಾವಿಸುತ್ತಿರುವಾಗ, ಈ ಜಮಾಅತ್ ನಾಶವಾಗುವುದು ಎಂದು ಭಾವಿಸುತ್ತಿರುವಾಗ ಅವನು ಎರಡನೆಯ ಶಕ್ತಿಪ್ರಭಾವವನ್ನು ಪ್ರಕಟಿಸುತ್ತಾನೆ. ಆದ್ದರಿಂದ ಕೊನೆಯ ತನಕ ಸಹನೆದೋರುವವರು ಅಲ್ಲಾಹನು ಈ ದೃಷ್ಟಾಂತವನ್ನು ನೋಡುವರು. ಹಝ್ರತ್ ಅಬೂಬಕರ್‌ರ(ರ) ಕಾಲದಲ್ಲೂ ಹೀಗೆಯೇ ನಡೆಯಿತು. ಹಝ್ರತ್ ಪೈಗಂಬರರ(ಸ) ನಿಧನ ಅಸಮಯದ ನಿಧನವೆಂದು ಭಾವಿಸಲಾಗಿತ್ತು. ಅನೇಕ ಗ್ರಾಮವಾಸಿಗಳು ಧರ್ಮತ್ಯಾಗ ಮಾಡಿದರು. ಸಹಾಬರು ಕೂಡ ದುಃಖದಿಂದ ಮತಿಗೆಟ್ಟವರಂತೆ ಆಗಿದ್ದರು. ಆ ಸಮಯದಲ್ಲಿ ಅಲ್ಲಾಹನು ಹಝ್ರತ್ ಅಬೂಬಕರ್‌ರನ್ನು(ರ) ಎಬ್ಬಿಸಿ ನಿಲ್ಲಿಸಿಕೊಂಡು ತನ್ನ ಶಕ್ತಿಯ ಮಾದರಿಯನ್ನು ತೋರಿಸಿದನು. ಇಸ್ಲಾಮನ್ನು ನಾಶವಾಗುವುದರಿಂದ ರಕ್ಷಿಸಿದನು. ಮತ್ತು **ವಲಯುಮಕ್ಕಿನನ್ನಲಹುಮ್ ದೀನಹುಮುಲ್ಲಝಿರ್ ತಝಾಲಹುಮ್ ವಲಯುಬದ್ದಿಲನ್ನಹುಮ್ ಮಿಮ್‌ಬಅದಿ ಖೌಫಿಹಿಮ್ ಅಮ್‌ನ** (ಅನ್ನೂರ್:56) ಅಂದರೆ ಭಯದ ನಂತರ ಸ್ಥಿರತೆಯನ್ನು ನೀಡುವೆನು ಎಂಬ ವಾಗ್ದಾನವನ್ನು ಈಡೇರಿಸಿದನು.
(ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ-20, ಪುಟ-304-305)

ತದನಂತರ ಮತ್ತೆ ಹಝ್ರತ್ ಮಸೀಹ್ ಮೌಊದ್‌ಬಿ ಹೇಳುತ್ತಾರೆ: ಆದುದರಿಂದ ಪ್ರಿಯರೇ, ಪುರಾತನ ಕಾಲದಿಂದಲೂ ಅಲ್ಲಾಹನ ನಡವಳಿಕೆ ಹೀಗೆ ಇದೆ: ಅವನು ಎರಡು ದಿವ್ಯ ಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡುತ್ತಾನೆ. ಅಲ್ಲಾಹನು ತನ್ನ ಪುರತನವಾದ ನಡವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. **"ಬರಾಹೀನೆ ಅಹ್ಮದಿಯಾ"** ಎಂಬ ಗ್ರಂಥದಲ್ಲಿ ಅಲ್ಲಾಹನ ಈ ವಾಗ್ದಾನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದಾನ ಪ್ರಕಾರ ದ್ವಿತೀಯ ದಿವ್ಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದಾನ ನನ್ನ ಬಗ್ಗೆಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ. "ನಿನ್ನ ಅನುಯಾಯಿಗಳ ಈ ಜಮಾತಿಗೆ ಪುನರುತ್ಥಾನದ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು." ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಅವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು. ಅವನು ಮಾಡಿದುದನೆಲ್ಲವನ್ನೂ ನಿಮಗೆ ತೋರಿಸುವೆನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು. ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಮೂರ್ತ ರೂಪವಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. (ಅಲ್‌ವಸಿಯ್ಯತ್, ರೂಹಾನಿ ಖಝಾಇನ್ ಸಂಪುಟ-20, ಪುಟ-305-306)

ಒಟ್ಟಿನಲ್ಲಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಯ ಪ್ರಕಾರ ಕಳೆದ 113 ವರ್ಷಗಳಿಂದ ಅಲ್ಲಾಹನ ಅನುಗ್ರಹಗಳು ಒಂದೊಂದಾಗಿ ಈಡೇರುವುದನ್ನು ನೋಡುತ್ತಿದ್ದೇವೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹುರ ಬಗ್ಗೆ **ಕರ್ಝನ್ ಗಝಟ್** ಪತ್ರಿಕೆ ಹೀಗೆ ಬರೆದಿತ್ತು: **"**ಈಗ ಮಿರ್ಝಾಯಿಗಳಿಗೆ ಏನು ಬಾಕಿಯಿದೆ? ಅವರ ತಲೆ ಕಡಿದುಹೋಯಿತು. ಈಗ ಅವರ ಇಮಾಂ ಆಗಿರುವ ವ್ಯಕ್ತಿಯಿಂದ ಏನೂ ಆಗಲಿಕ್ಕಿಲ್ಲ. ಅವರು ನಿಮಗೆ ಮಸೀದಿಯಲ್ಲಿ ಖುರ್‌ಆನ್ ಓದಿಹೇಳುವರು ಅಷ್ಟೇ." ಆದರೆ ಈ ಬುದ್ಧಿಹೀನರಿಗೆ ಏನು ಗೊತ್ತು? ಪವಿತ್ರ ಖುರ್‌ಆನಿನ ಜ್ಞಾನವನ್ನು ಹರಡುವುದೇ ಮಹತ್ತಾದ ಕಾರ್ಯವಾಗಿದೆ. ಅದಕ್ಕಾಗಿಯೇ ಹಝ್ರತ್ ಇಬ್ರಾಹೀಂ ಅಲೈಹಿಸ್ಸಲಾಂ

ತನ್ನ ಸಂತಾನದಲ್ಲಿ ಒಂದು ಮಹತ್ತಾದ ಪ್ರವಾದಿಯ ಆಗಮನಕ್ಕಾಗಿ ದುಆ ಮಾಡಿದ್ದರು. ಈ ಮಹತ್ತಾದ ಶರೀಅತಿಗಾಗಿಯೇ ಹಝ್ರತ್ ಪೈಗಂಬರ್(ಸ) ಆಗಮಿಸಿದರು. ಈ ಪರಿಪೂರ್ಣ ಗ್ರಂಥವನ್ನು ಓದುವವನೂ ಕಲಿಸುವವನೂ ಇಹಪರಲೋಕದಲ್ಲಿ ಯಶಸ್ಸು ಗಳಿಸುವನು. ಇದೇ ಗ್ರಂಥದ ಅಧ್ಯಾಪನೆಯನ್ನು ಹರಡಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ಆವಿರ್ಭವಿಸಿದರು. ಇದೇ ಕೆಲಸವನ್ನು ಮಾಡಲಿಕ್ಕಾಗಿ ಖಿಲಾಫತಿನ ವ್ಯವಸ್ಥೆ ಜಾರಿಯಲ್ಲಿದೆ. ಹೇಗಿದ್ದರೂ ಈ ಮಾತನ್ನು ಕೇಳಿಕೊಂಡು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: "ಅವರು ಹೇಳಿದಂತೆ ನಿಮಗೆ ಪವಿತ್ರ ಖುರ್ಆನ್ ಓದಿಹೇಳಲು ನನಗೆ ಅಲ್ಲಾಹನು ಸೌಭಾಗ್ಯ ನೀಡಲಿ." (ಬದರ್ ಖಾದಿಯಾನ್, 7–06–1909, ಸಂಪುಟ–8, ಸಂಚಿಕೆ 10, ಪುಟ–5)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಈ ಕಾರ್ಯವನ್ನು ಬಹಳ ಉತ್ತಮವಾಗಿ ನೆರವೇರಿಸಿದರು. ಅದರೊಂದಿಗೆ ಕಪಟವಿಶ್ವಾಸಿಗಳ ಮತ್ತು ಅಂಜುಮನಿನ ಕೆಲವು ಪ್ರಧಾನ ವ್ಯಕ್ತಿಗಳ ಪಿತೂರಿಗಳನ್ನು ಎಷ್ಟು ಶಕ್ತವಾಗಿ ಅದುಮಿ ಹಾಕಿದರು ಎಂದರೆ ಯಾರಿಗೂ ಯಾವುದೇ ರೀತಿಯ ಕೇಡುಂಟುಮಾಡಲು ಸಾಧ್ಯವಾಗಲಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ತನ್ನ ಖಿಲಾಫತಿನ ಮೊದಲ ಭಾಷಣದಲ್ಲಿ ಹೀಗೆ ಹೇಳಿದರು: "ಈಗ ನಿಮ್ಮ ಪ್ರಕೃತಿಯ ಅಥವಾ ಆಸಕ್ತಿಗಳ ದಿಕ್ಕು ಯಾವ ಕಡೆಗೂ ಆಗಿದ್ದರೂ ನನ್ನ ಆದೇಶಗಳನ್ನು ಈಡೇರಿಸಬೇಕಾಗುವುದು." (ಬದರ್ ಖಾದಿಯಾನ್, 02–06–1908, ಸಂಚಿಕೆ–22, ಸಂಪುಟ–7, ಪುಟ–8)

ಅದೇ ರೀತಿಯಲ್ಲಿ ಒಂದು ಸಂದರ್ಭದಲ್ಲಿ ಮಸ್ಜಿದ್ ಮುಬಾರಕ್‌ನಲ್ಲಿ ನಿಂತುಕೊಂಡು ಬಹಳ ಪ್ರತಾಪದ ಶೈಲಿಯಲ್ಲಿ ಭಾಷಣ ಮಾಡುತ್ತಾ ಹೇಳಿದರು: 'ನೀವು ನಿಮ್ಮ ಕೃತ್ಯಗಳಿಂದ ನನ್ನ ದುಃಖಕ್ಕೆ ಕಾರಣವಾಗಿದ್ದೀರಿ. ಆದ್ದರಿಂದ ನೀವು ನಿರ್ಮಿಸಿದ ಮಸೀದಿಯ ಭಾಗದಲ್ಲಿ ನಾನು ನಿಂತಿಲ್ಲ. ಬದಲಿಗೆ ನಾನು ನನ್ನ ಮಿರ್ಝಾ ಸಾಹಿಬ್‌ರ ಮಸೀದಿಯ ಭಾಗದಲ್ಲಿ ನಿಂತಿದ್ದೇನೆ. ಸಮುದಾಯ ಮತ್ತು ಅಂಜುಮನ್ ಎರಡೂ ಸಹ ಖಲೀಫರನ್ನು ಅನುಸರಿಸಬೇಕು. ಜಮಾಅತಿನವರು ಮತ್ತು ಅಂಜುಮನ್ ಎರಡೂ ಸೇವಕರಾಗಿರುವರು. ಅಂಜುಮನ್ ಸಲಹೆ ನೀಡಲು ಮಾಡಿರುವ ಒಂದು ವ್ಯವಸ್ಥೆಯಾಗಿದೆ. ಸಲಹೆಗಾರನೆಂಬ ನೆಲೆಯಲ್ಲಿ ಅಂಜುಮನಿನಿಂದ ಸಲಹೆ ಪಡೆಯಲಾಗುವುದು. ಸಮಾಲೋಚನೆ ನಡೆಸುವುದು ಆವಶ್ಯಕವೂ ಆಗಿದೆ. ಖಲೀಫರ ಕೆಲಸ ಬೈಅತ್ ಪಡೆಯವುದಾಗಿದೆ, ನೈಜವಾದ ಅಧಿಕಾರಿ ಅಂಜುಮನ್ ಆಗಿದೆ ಎಂದು ಬರೆದವರು ತೌಬ ಮಾಡಲಿ. ಈ ಜಮಾಅತಿನಿಂದ ಯಾರಾದರೂ ಬಿಟ್ಟುಹೋಗುವವನಾದರೆ, ಅವನ ಬದಲಿಗೆ ಒಂದು ಸಮೂಹವನ್ನು ನಿನಗೆ ನೀಡುವೆನು ಎಂದು ಅಲ್ಲಾಹನು ನನಗೆ ತಿಳಿಸಿದ್ದಾನೆ. ಖಲೀಫರ ಕೆಲಸ ಕೇವಲ ನಮಾಝಿಗೆ ಇಮಾಮತ್ ವಹಿಸುವುದು, ನಿಕಾಹ್ ನಡೆಸುವುದು, ಬೈಅತ್ ಪಡೆಯುವುದು ಎಂದು ಹೇಳಲಾಗುತ್ತದೆ. ಈ ಕೆಲಸವಂತು ಒಬ್ಬ ಮುಲ್ಲಾ ಕೂಡ ಮಾಡಬಹುದಾಗಿದೆ. ಅದಕ್ಕಾಗಿ ಖಲೀಫರ ಆವಶ್ಯಕತೆಯೇನದೆ? ಅದಕ್ಕಾಗಿ ಖಲೀಫರ ಆವಶ್ಯಕತೆಯಿಲ್ಲ. ಈ ರೀತಿಯ ಬೈಅತಿಗೆ ನಾನು ಯಾವುದೇ ಬೆಲೆ ಕೊಡುವುದಿಲ್ಲ. ಪರಿಪೂರ್ಣ ಅನುಸರಣೆ ಮಾಡುವ ಬೈಅತ್ ಮಾತ್ರವೇ ಬೈಅತ್ ಆಗಿದೆ. ಖಲೀಫರ ಯಾವುದೇ ಒಂದು ಆಜ್ಞೆಯನ್ನೂ ಅನುಸರಿಸದೇ ಇರಬಾರದು.

(ತಾರೀಖೇ ಅಹ್ಮದಿಯ್ಯತ್, ಸಂಪುಟ–3, ಪುಟ–262)

ಒಟ್ಟಿನಲ್ಲಿ ಈ ಭಾಷಣದಿಂದ ಕಪಟವಿಶ್ವಾಸಿಗಳ ಯೋಜನೆಗಳು ಪರಾಜಯಗೊಂಡಿತು. ವಿರೋಧಿಗಳ ಬಾಯಿ ಮುಚ್ಚಲ್ಪಟ್ಟಿತು. ಯಾವ ವ್ಯಕ್ತಿಯನ್ನು ಬಲಹೀನ ಮತ್ತು ವೃದ್ಧ ವ್ಯಕ್ತಿಯೆಂದು ಭಾವಿಸಲಾಗಿತ್ತೋ ಆ ವ್ಯಕ್ತಿ ಅಲ್ಲಾಹನ ಅನುಗ್ರಹದಿಂದ ಎಷ್ಟು ಉತ್ತಮವಾಗಿ ಮಾತನಾಡಿದರು ಎಂದರೆ, ಇತರರು ಎಲ್ಲರೂ ನೊರೆಯಂತೆ ಹೊರಟುಹೋದರು. ಆತ್ಮಪ್ರಶಂಸೆ ಮಾಡುವವರು ತಮ್ಮ ಮುಖವನ್ನು ಮರೆಮಾಚಲು ತೊಡಗಿದರು. ಜಮಾಅತಿನ ನಿಷ್ಠಾವಂತರು ಒಂದು ಹೊಸ ನಿರ್ಧಾರದೊಂದಿಗೆ ಬೈಅತಿನ ಪ್ರತಿಜ್ಞೆಯನ್ನು ಮಾಡಿದರು. ಅನಂತರ ಜಮಾಅತಿನ ಪ್ರಗತಿ ಹೇಗೆ ಆಯಿತು ಎಂದು ಲೋಕವು ನೋಡಿತು.

1914ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ನಿಧನರಾದಾಗ ಜಮಾಅತಿನಲ್ಲಿ ಒಂದು ಭೂಕಂಪದ ಅವಸ್ಥೆಯುಂಟಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಇದ್ದ ಕಾರಣದಿಂದ ಮೌನವಾಗಿ ಇದ್ದ ಅಂಜುಮನಿನ ಬೆಂಬಲಿಗರು ಈಗ ತಲೆಯೆತ್ತಲು ತೊಡಗಿದರು. ಅದೇ ರೀತಿಯಲ್ಲಿ ಕಪಟವಿಶ್ವಾಸಿಗಳು ಸಹ ತಲೆಯೆತ್ತಲು ಶುರುಮಾಡಿದರು. ಆದರೆ ಅಲ್ಲಾಹನ ಸಹಾಯಹಸ್ತ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಮಾಡಲಾದ ವಾಗ್ದಾನಗಳ ಪ್ರಕಾರ ಖಿಲಾಫತಿನ ಸ್ಥಾನವನ್ನು ಸಂರಕ್ಷಿಸಿತ್ತು. ಜಮಾಅತಿನವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯನ್ನು (ರ) ಖಲೀಫರನ್ನಾಗಿ ಮಾಡುವರು ಎಂಬ ಭಯ ಅಂಜುಮನಿನ ಬೆಂಬಲಿಗರಿಗೆ ಇತ್ತು. ಆದ್ದರಿಂದ ಖಲೀಫ ಆಗದಂತೆ ಅವರು ಬಹಳ ಪ್ರಯತ್ನ ಮಾಡಿದರು. ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್‌ರು ಹೇಳಿದರು: ಹೇಗಿದ್ದರೂ ಖಲೀಫ ಬೇಕೇ ಬೇಕು. ಆದರೆ ನನಗೆ ಖಲೀಫನಾಗಲು ಯಾವುದೇ ಆಸಕ್ತಿಯಿಲ್ಲ. ನೀವು ಯಾರನ್ನು ಬೇಕಾದರೂ ಖಲೀಫರನ್ನಾಗಿ ಮಾಡಿರಿ. ನಾನು ಮತ್ತು ನನ್ನ ಕುಟುಂಬದವರೆಲ್ಲ ಅವರಿಗೆ ಪ್ರಾಮಾಣಿಕವಾಗಿ ಬೈಅತ್ ಮಾಡುವೆವು. ಆದರೆ ಅಂಜುಮನನ ಬೆಂಬಲಿಗರು ಈ ಮಾತನ್ನು ಅಂಗೀಕರಿಸಲಿಲ್ಲ. ಹೇಗಿದ್ದರೂ ಹಝ್ರತ್ ಮಸೀಹ್ ಮೌಊದ್‌ರ(ಅ) ವಸಿಯ್ಯತ್ ಪ್ರಕಾರ ಸತ್ಯವಿಶ್ವಾಸಿಗಳ ಜಮಾಅತ್ ಮಸ್ಜಿದ್ ನೂರ್‌ನಲ್ಲಿ ಒಟ್ಟುಗೂಡಿದರು. ಸುಮಾರು ಎರಡು ಸಾವಿರದಷ್ಟು ಜನರು ಅಲ್ಲಿ ಒಟ್ಟುಗೂಡಿದ್ದರು. ಎಲ್ಲರೂ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್‌ರನ್ನು ಖಲೀಫರನ್ನಾಗಿ ಆಯ್ಕೆ ಮಾಡಿದರು. ಎಲ್ಲರೂ ಆವೇಶದಿಂದ ಮುಂದಕ್ಕೆ ಧಾವಿಸುತ್ತಾ ಬೈಅತ್ ಮಾಡುತ್ತಿದ್ದರು. ಅಲ್ಲಿ ಇದನ್ನು ನೋಡುತ್ತಿರುವವರು ಹೇಳುತ್ತಾರೆ ದೇವಧೂತರು ಎಲ್ಲಾ ಜನರನ್ನು ಹಿಡಿದು ಹಿಡಿದು ಅಲ್ಲಾಹನ ಈ ಚುನಾವಣೆಗೆ ಬೈಅತ್ ಮಾಡಿಸುತ್ತಿರಬಹುದು ಎನಿಸುತ್ತಿತ್ತು. (ಸಿಲ್‌ಸಿಲ ಅಹ್ಮದಿಯ, ಸಂಪುಟ–1, ಪುಟ–330–331)

ಕೊನೇಗೆ ಇದನ್ನೆಲ್ಲ ನೋಡಿಕೊಂಡು ಅಂಜುಮನಿನ ಬೆಂಬಲಿಗರು ಎಲ್ಲ ಖಜಾನೆಗಳನ್ನು ತೆಗೆದುಕೊಂಡು ಅಲ್ಲಿಂದ ಹೊರಟುಹೋದರು. ಆದರೆ ಯಾವ ರೀತಿಯಲ್ಲಿ ಖಿಲಾಫತ್ ಮೂಲಕ ಅಲ್ಲಾಹನು ಜಮಾಅತಿಗೆ ಸುದೃಢತೆ ನೀಡಿದನು ಎಂದು ಲೋಕವು ನೋಡಿತು.

ಯಾವ ಯುವಕನ ಕೈಯಿಗೆ ಅಲ್ಲಾಹನು ಖಿಲಾಫತಿನ ಲಗಾಮನ್ನು ನೀಡಿದ್ದನೋ ಆ ಯುವಕನು ಎಷ್ಟು ವೇಗವಾಗಿ ಜಮಾಅತನ್ನು ಹಿಡಿದುಕೊಂಡು ಅಭಿವೃದ್ಧಿಯ ಮಜಲುಗಳ ಮೇಲೆ ಹೆಜ್ಜೆ ಹಾಕುತ್ತಾ ಮುಂದಕ್ಕೆ ಧಾವಿಸಿದನು ಎಂಬುದಕ್ಕೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹುರ 52 ವರ್ಷಗಳ ಖಿಲಾಫತ್ ಕಾಲಘಟ್ಟವು ಸಾಕ್ಷ್ಯವಹಿಸುತ್ತದೆ. ಖಾದಿಯಾನಿನಲ್ಲಿ ಈಗ ಕ್ರೈಸ್ತರ ಆಡಳಿತ ಬರುವುದು ಎಂದು ಅಂಜುಮನಿನ ಖಜಾನೆಯನ್ನು ಖಾಲಿಮಾಡಿದ್ದವರು ವಾದಿಸುತ್ತಿದ್ದರು. ಆದರೆ ಖಿಲಾಫತಿನೊಂದಿಗೆ ಅಲ್ಲಾಹನ ನೆರವು ಇದೆಯೆಂದೂ ಕ್ರೈಸ್ತರು ಮುಹಮ್ಮದೀ ಮಸೀಹರ ಬಾವುಟದ ಕೆಳಗೆ ಬರುತ್ತಿರುದನ್ನು ಈ ಬೆಂಬಲಿಗರ ಸಂತಾನಗಳು ಕಾಣುತ್ತಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಲೋಕದ ಅನೇಕ ದೇಶಗಳಲ್ಲಿ ಮಿಶನ್‌ಗಳನ್ನು ತೆರೆದರು. ಆಫ್ರಿಕದಲ್ಲಿ ಕ್ರೈಸ್ತ ಮಿಶನರಿಗಳಿಗೆ ಅಹ್ಮದಿ ಮುಬಲ್ಲಿಗರ ಮುಂದೆ ನಿಲ್ಲಲು ಧೈರ್ಯ ಬರುತ್ತಿರಲಿಲ್ಲ. ಕ್ರೈಸ್ತ ಧರ್ಮ ಹರಡುವುದನ್ನು ಅಹ್ಮದಿಯ್ಯತ್ ತಡೆಯುತ್ತಿದೆ ಎಂದು ಅವರು ಸಮ್ಮತಿಸಿದರು. ಅವರ ರಿಪೋರ್ಟುಗಳಲ್ಲಿ ಅದರ ಪ್ರಸ್ತಾಪವಿದೆ. ಒಟ್ಟಿನಲ್ಲಿ, ಖಾದಿಯಾನಿನ ಮೇಲೆ ಹಲ್ಲೆ ನಡೆಸುವ ಯೋಜನೆಯಾಗಿರಲಿ, ತಬ್ಲೀಗ್ ಮೈದಾನವಾಗಿರಲಿ, ಹಿಜ್ರತಿನ ಸಮಯವಾಗಿರಲಿ, ಎಲ್ಲ ಸಂದರ್ಭದಲ್ಲೂ ಹಝ್ರತ್ ಮುಸ್ಲಿಹ್ ಮೌಊದ್(ರ) ಜಮಾಅತಿನ ಹಡಗನ್ನು ಅಲ್ಲಾಹನ ಸಹಾಯ ಮತ್ತು ನೆರವಿನೊಂದಿಗೆ ಯಶಸ್ಸಿನ ಮಜಲುಗಳ ತನಕ ತಲುಪಿಸಿದರು ಮತ್ತು ಸುರಕ್ಷಿತಗೊಳಿಸಿದರು.

1965ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ನಿಧನರಾದಾಗ ಅಲ್ಲಾಹನು ಎರಡನೇ ಶಕ್ತಿ ಪ್ರಭಾವದ ಮೂರನೇ ಪ್ರಕಟನೆಯನ್ನು ಎಬ್ಬಿಸಿ ನಿಲ್ಲಿಸಿದನು. ಮತ್ತೆ ಜಮಾಅತ್ತನ್ನು ಭಯದಿಂದ ಸ್ಥಿರತೆಯ ಕಡೆ ತರುತ್ತ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹಿಬ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರ ಕೈಯಲ್ಲಿ ನೆಲೆನಿಲ್ಲಿಸಿದನು. ಮತ್ತು ಜಮಾಅತ್ ಪ್ರಗತಿಯ ಪದವಿಗಳಲ್ಲಿ ಹೆಜ್ಜೆಹಾಕಲು ತೊಡಗಿತು. ಆಫ್ರಿಕದಲ್ಲಿ ಸ್ಕೂಲ್ ಮತ್ತು ಆಸ್ಪತ್ರೆ ಜಾರಿಯಾಗುವ ಒಂದು ಹೊಸ ಯುಗ ಶುರುವಾಯಿತು. ಅಹ್ಮದಿಯ್ಯತ್ ಆಫ್ರಿಕದಲ್ಲಿ ಪರಿಚಿತವಾಯಿತು. ಹೀಗೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹ್‌ರ ಮೂಲಕ ಲೋಕದೆಲ್ಲಡೆ ಜಮಾಅತಿನ ಪರಿಚಯವಾಯಿತು. ಆಫ್ರಿಕದ ಕೆಲವು ದೇಶಗಳಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ಭೇಟಿ ನೀಡಿದರು. ಅದರ ಅಸಾಧಾರಣವಾದ ಪ್ರಭಾವ ಉಂಟಾಯಿತು. 1974ರಲ್ಲಿ ಅಹ್ಮದಿಯರನ್ನು ಮುಸ್ಲಿಮೇತರರು ಎಂದು ಹೇಳಿಕೊಂಡು ಜಮಾಅತಿನ ಕೈಯಲ್ಲಿ ಭಿಕ್ಷಾಪಾತ್ರೆ ಕೊಡುವುದಾಗಿ ಹೇಳಿಕೊಂಡಾಗ, ಅಲ್ಲಾಹನು ಶತ್ರುಗಳ ಯೋಜನೆಗಳನ್ನು ಮಣ್ಣುಪಾಲು ಮಾಡಿಕೊಂಡು ಜಮಾಅತಿಗೆ ಸಾಂಪತ್ತಿಕ ಸೌಲಭ್ಯಗಳ ಹೊಸ ಮಾರ್ಗಗಳನ್ನು ತೆರೆದನು.

1982ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಸಹ ನಮ್ಮನ್ನು ಅಗಲಿ ಹೋದಾಗ ಅಲ್ಲಾಹನು ಮತ್ತೊಮ್ಮೆ ತನ್ನ ವಾಗ್ದಾನದ ಪ್ರಕಾರ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹಿಬ್ ಖಲೀಫತುಲ್ ಮಸೀಹ್ ರಾಬೆ ರವರ ಮೂಲಕ ಜಮಾಅತ್ತನ್ನು ಭಯದ ಸ್ಥಿತಿಯನ್ನು ಶಾಂತಿಯಲ್ಲಿ ಬದಲಾಯಿಸಿದನು. ನಾಲ್ಕನೇ ಖಿಲಾಫತಿನ ಆರಂಭದಲ್ಲಿ ಜಮಾಅತಿನ ಅಭಿವೃದ್ಧಿಯನ್ನು ನೋಡಿಕೊಂಡು ಮೂರ್ಛೆ ಹೋಗಿದ್ದ ಶತ್ರುಗಳು, ಅಹ್ಮದಿಯಾ ಖಿಲಾಫತಿನ ಕೈಗಳನ್ನು ತಡೆದಿಡಲು ಯೋಜನೆಯನ್ನು ಮಾಡಿದರು. ಆದರೆ ಅಲ್ಲಾಹನು ತನ್ನ ಅಸಾಮಾನ್ಯವಾದ ಸಹಾಯದೊಂದಿಗೆ ಹಝ್ರತ್

ಖ಼ಲೀಫತುಲ್ ಮಸೀಹ್ ರಾಬಿಅ್‌ಗೆ ವಲಸೆ ಹೋಗಲು ಏರ್ಪಾಡು ಮಾಡಿದನು. ಸೆಟ್‌ಲೈಟಿನ ಮೂಲಕ ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮಿನ ಸಂದೇಶವು ಮನೆಮನೆಗೆ ತಲುಪಲು ಶುರುವಾಯಿತು.

2003ರಲ್ಲಿ ಹಝ಼್ರತ್ ಖ಼ಲೀಫತುಲ್ ರಾಬಿಅ್ ರಹ್ಮಹುಲ್ಲಾಹ್‌ರ ನಿಧನ ಜಮಾಅತಿಗೆ ಬಹಳ ದೊಡ್ಡ ದಕ್ಕೆಯಾಗಿತ್ತು. ಆದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಪ್ರಾರ್ಥನೆಗಳನ್ನು ಆಲಿಸಿದನು ಮತ್ತು ಭಯದ ಸ್ಥಿತಿಯನ್ನು ಒಂದೇ ಸವನೆ ಸಮಾಧಾನಕ್ಕೆ ಬದಲಿಸಿದನು. ಮತ್ತು ಇಸ್ಲಾಮಿನ ಇತಿಹಾಸದಲ್ಲಿ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೂಲಕ ಐದನೇ ಖಿಲಾಫತ್ ಆಗಿದೆ.

ಇಸ್ಲಾಮಿನ ಆರಂಭಿಕ ಕಾಲಘಟ್ಟದಲ್ಲಿ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಯ ಪ್ರಕಾರ ನೇರಮಾರ್ಗದ ಖ಼ಿಲಾಫತ್ ನಾಲ್ವರು ಖ಼ಲೀಫರಿಗೆ ಸೀಮಿತವಾಗಿತ್ತು. ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ(ಅ) ಆವಿರ್ಭಾವದ ನಂತರ ಇಸ್ಲಾಮಿನ ಚರಿತ್ರೆಯಲ್ಲಿ ಯಾವ ರೀತಿಯಲ್ಲಿ ಅನೇಕ ಹೊಸ ಬಾಗಿಲುಗಳು ತೆರೆದವೋ ಅವುಗಳಲ್ಲಿ ಐದನೇ ಖ಼ಿಲಾಫತ್ ಸಹ ಅವುಗಳದ್ದೇ ಒಂದು ಭಾಗವಾಗಿದೆ. ಈ ಜಮಾಅತಿನ ನೇತೃತ್ವ ಅಷ್ಟು ಸುದೃಢವಾದ ಕೈಗಳಲ್ಲಿ ಇಲ್ಲವೆಂದು ಶತ್ರುಗಳು ಭಾವಿಸಿದರು. ಆದರೆ ನೈಜವಾದ ಕೈ ಅಲ್ಲಾಹನದ್ದಾಗಿದೆ ಎಂದು ಇವರಿಗೆ ಏನು ಗೊತ್ತು. ಅವನು ಯಾರಿಗೆ ನೆರವು ನೀಡುತ್ತಾನೋ, ಅವನು ಯಾರೊಂದಿಗೆ ಇರುತ್ತಾನೋ ಅವರನ್ನು ಬಲಪಡಿಸುತ್ತಾನೆ. ಇಂದು ಶತ್ರುಗಳ ಅಸೂಯೆಯ ಕಣ್ಣುಗಳು ಮೊದಲಿಗಿಂತ ಹೆಚ್ಚಾಗಿ ಜಮಾಅತಿನ ಅಭಿವೃದ್ಧಿಗಳನ್ನು ಕಾಣುತ್ತಿವೆ. ಜಮಾಅತಿನ ಪರಿಚಯ ಅಸಾಮಾನ್ಯವಾದ ರೀತಿಯಲ್ಲಿ ಈಗ ಆಗುತ್ತಿದೆ. ಎಲ್ಲ ವಿಭಾಗದಲ್ಲೂ ಎಲ್ಲ ಮಟ್ಟದಲ್ಲೂ ಅಸಾಮಾನ್ಯವಾದ ಪ್ರಗತಿ ಆಗುತ್ತಿದೆ. ನಾನಂತು ಒಬ್ಬ ದುರ್ಬಲ ಮನುಷ್ಯನಾಗಿರುವೆನು. ನನ್ನ ಯಾವುದೇ ಗುಣದ ಕಾರಣದಿಂದ ಇವೆಲ್ಲವೂ ಆಗುತ್ತಿಲ್ಲ. ಲೋಕದ ಸರ್ಕಾರದ ಅಧಿಕಾರಿಗಳಿಗೆ ಮತ್ತು ಪಾರ್ಲಿಮೆಂಟ್‌ಗಳಲ್ಲಿ ಜಮಾಅತಿನ ಪರಿಚಯವಾಗುತ್ತಿದೆ. ಇವೆಲ್ಲವೂ ಅಲ್ಲಾಹನ ಕೃಪೆಯಿಂದ ಮತ್ತು ಹಝ಼್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಅಲ್ಲಾಹನು ಮಾಡಿದ್ದ ವಾಗ್ದಾನಗಳ ಕಾರಣದಿಂದ ಮತ್ತು ಹಝ಼್ರತ್ ಪೈಗಂಬರರ(ಸ) ಭವಿಷ್ಯವಾಣಿಗಳ ಪ್ರಕಾರ ಆಗುತ್ತಿವೆ. ಪ್ರತಿದಿನ ನಾವು ಅಲ್ಲಾಹನ ಅನುಗ್ರಹದ ದೃಶ್ಯಗಳನ್ನು ನೋಡುತ್ತಿದ್ದೇವೆ. ಈ ಕಾಲಘಟ್ಟವು ಸಹ ಹಝ಼್ರತ್ ಪೈಗಂಬರರ(ಸ) ಭವಿಷ್ಯವಾಣಿಗಳ ಪ್ರಕಾರವೇ ಆಗಿದೆ. ಈ ಕಾಲದಲ್ಲಿ ಅಹ್ಮದಿಯತ್ತಿನ ಪರಿಚಯ ಲೋಕದೆಲ್ಲಡೆ ಅಸಾಮಾನ್ಯವಾಗಿ ವರ್ಧಿಸಿದೆ. ಪವಿತ್ರ ಖುರ್‌ಆನಿನ ತರ್ಜುಮೆಯ ಕೆಲಸವಾಗಿರಲಿ, ಹಝ಼್ರತ್ ಮಸೀಹ್ ಮೌಊದ್‌ರ ಗ್ರಂಥಗಳ ಪ್ರಕಾಶನದ ಕೆಲಸವಾಗಿರಲಿ ಅಥವಾ ಎಂ.ಟಿ.ಎ.ಯ ಹರಡುವಿಕೆ ಆಗಿರಲಿ, ಪ್ರತಿಯೊಂದು ಮೈದಾನದಲ್ಲಿ ಅಸಾಮಾನ್ಯವಾದ ಪ್ರಗತಿಯನ್ನು ನಾವು ಕಾಣುತ್ತಿದ್ದೇವೆ. ಮೊದಲು ಎಂ.ಟಿ.ಎ. ಒಂದು ಭಾಷೆಯಲ್ಲಿ, ಒಂದು ಚಾನೆಲ್‌ನಲ್ಲಿ ಆಗಿತ್ತು. ಈಗ ಲೋಕದಲ್ಲಿ ಎಂ.ಟಿ.ಎ.ಯ ಎಂಟು ಚ್ಯಾನಲ್‌ಗಳು ಕಾರ್ಯನಿರತವಾಗಿವೆ. ಲೋಕದ ಹಲವು ದೇಶಗಳಲ್ಲಿ ಎಂ.ಟಿ.ಎ.ಯ ಸ್ಟುಡಿಯೋ ಇವೆ. ಅಲ್ಲಿಂದ ಎಂ.ಟಿ.ಎ.ಯ ಪ್ರೋಗ್ರಾಂ ಜಾರಿಯಾಗಿರುತ್ತವೆ. ಆಫ್ರಿಕದಲ್ಲೂ ನಾರ್ಥ್ ಅಮೇರಿಕದಲ್ಲೂ ಯುರೋಪಿನಲ್ಲೂ ಸ್ಟುಡಿಯೋ ಇವೆ. ಅನೇಕ ಜಾಗಗಳಲ್ಲಿ ಇವೆ. ನಾವು ನಮ್ಮ ಸಾಂಪತ್ತಿಕ ಸ್ಥಿತಿ ಮತ್ತು ಸೌಕರ್ಯಗಳನ್ನು ನೋಡುವರಾದರೆ ಇದು ಸಾಧ್ಯವೇ ಅಲ್ಲ. ಸೋಶಿಯಲ್ ಮೀಡಿಯದ ಮುಖಾಂತರವು ಇಸ್ಲಾಮಿನ ನೈಜ ಸಂದೇಶ ತಲುಪುತ್ತಿದೆ. ಪಾಕಿಸ್ತಾನದ ಸರ್ಕಾರ ಅನೇಕ ರೀತಿಯಲ್ಲಿ ಅದಕ್ಕೆ ನಿಷೇಧ ಹೇರಿವೆಯಾದರೂ ಇತರ ದೇಶಗಳಲ್ಲಿ ಮೊದಲಿಗಿಂತ ಹೆಚ್ಚಾಗಿ ಅಲ್ಲಾಹನು ಮಾರ್ಗಗಳನ್ನು ತೆರೆದಿದ್ದಾನೆ. ಅದಲ್ಲದೆ ಖಿಲಾಫತಿನೊಂದಿಗೆ ಸಂಬಂಧವನ್ನು ನೆಲೆನಿಲ್ಲಿಸಲು ಅಲ್ಲಾಹನು ಹೊಸ ಮಾರ್ಗವನ್ನು ನಮಗೆ ಮಾಡಿದ್ದಾನೆ. ಅದು ಈ ಕೋವಿಡಿನ ರೋಗದ ಕಾರಣದಿಂದ ಉಂಟಾಗಿವೆ. ಆನ್‌ಲೈನ್ ಮೀಟಿಂಗ್ ಅಥವಾ ವರ್ಚುವಲ್ ಮುಲಾಖತ್ ಮೂಲಕ ಮೀಟಿಂಗ್‌ಗಳು ಸಹ ನಡೆಯುತ್ತಿವೆ. ಅದರಿಂದ ನೇರವಾಗಿ ಜಮಾಅತಿನೊಂದಿಗೆ ಸಂಪರ್ಕ ನಡೆಯುತ್ತಿವೆ. ಖಲೀಫತುಲ್ ಮಸೀಹ್‌ರಿಂದ ನೇರವಾಗಿ ಮಾರ್ಗದರ್ಶನವನ್ನು ಜನರು ಪಡೆಯುತ್ತಿದ್ದಾರೆ. ನಾನು ಇಲ್ಲಿಂದ ಆಫ್ರಿಕದ ಯಾವುದಾದರೂ ದೇಶದೊಂದಿಗೆ, ಇಂಡೋನೇಶಿಯದೊಂದಿಗೆ, ಆಸ್ಟ್ರೇಲಿಯದೊಂದಿಗೆ, ಅಮೇರಿಕದೊಂದಿಗೆ ಸಂಪರ್ಕ ಸ್ಥಾಪಿಸುತ್ತಿದ್ದೇನೆ. ಇವೆಲ್ಲವೂ ಅಲ್ಲಾಹನ ಸಹಾಯಗಳ ದೃಶ್ಯಗಳಾಗಿವೆ. ಅಲ್ಲಾಹನು ತನ್ನ ಅನುಗ್ರಹಗಳ ದೃಶ್ಯಗಳನ್ನು ತೋರಿಸಿದಕ್ಕೆ ನಮಗೆ ನೀಡಿದ ವರದಾನಗಳ ಹಕ್ಕುಗಳನ್ನು ನಾವು ಸದಾ ಈಡೇರಿಸುವವರಾಗಬೇಕು ಎಂಬುದನ್ನು ಎಂದಿಗೂ ಮರೆಯಬಾರದು. ಹಾಗಾದರೆ ಹಝ಼್ರತ್ ಪೈಗಂಬರರ(ಸ) ಭವಿಷ್ಯವಾಣಿಯ ಪ್ರಕಾರ ನಾವು ಈ ಅನುಗ್ರಹದಿಂದ ಪ್ರಯೋಜನ ಪಡೆಯುತ್ತಿರುವೆವು. ಅಭಿವೃದ್ಧಿಗಳು ಉಂಟಾಗುವುವು ಎಂದು ಅಲ್ಲಾಹನು ಹಝ಼್ರತ್ ಮಸೀಹ್ ಮೌಊದ್‌ರಿಗೆ ವಾಗ್ದಾನ ನೀಡಿದ್ದಾನೆ. ಅಲ್ಲಾಹನು ತನ್ನ ವಾಗ್ದಾನವನ್ನು ಲಂಘಿಸುವುದಿಲ್ಲ. ಆದರೆ ನಾವು ಇದರಿಂದ ಪ್ರಯೋಜನ ಪಡೆಯುವಂತಾಗಲು ನಮ್ಮ ಪಾತ್ರವನ್ನು ವಹಿಸಬೇಕು. ನಾವು ಅಲ್ಲಾಹನ ಕೃತಜ್ಞತೆಯುಳ್ಳ ದಾಸರಾಗಿಕೊಂಡು ಅವನ ಮುಂದೆ ಬಾಗುವ ಮತ್ತು ವಿಧೇಯರಾಗಿಕೊಂಡು ಅವನನ್ನು ಅನುಸರಿಸುವ ಆವಶ್ಯಕತೆಯಿದೆ. ಖ಼ಿಲಾಫತಿನ ಅನುಗ್ರಹದ ಪ್ರಕಟಣೆ ನಮ್ಮ ಪ್ರತಿಯೊಂದು ಮಾತು ಮತ್ತು ಕೃತಿಯಿಂದ ಆಗಬೇಕು. ಖ಼ಿಲಾಫತಿನೊಂದಿಗೆ ಅನುಸರಣೆಯ ವಾಗ್ದಾನ ನಾವು ನಮ್ಮ ಕೊನೆಯುಸಿರು ತನಕ ನೆರವೇರಿಸಲು ಪ್ರತಿಯೊಂದು ತ್ಯಾಗಗಳಿಗೆ ತಯಾರಾಗಬೇಕು. ಆಗಲೇ ನಾವು ನಮ್ಮ ಸಂತಾನಗಳನ್ನು ಖಿಲಾಫತಿಗೆ ಅನುಸರಣೆಯುಳ್ಳವರನ್ನಾಗಿ ಮಾಡಲು ಸಾಧ್ಯ. ಸತ್ಯವಿಶ್ವಾಸದಲ್ಲಿ ನೆಲೆನಿಲ್ಲುತ್ತಾ ಪ್ರತಿಯೊಂದು ತ್ಯಾಗಗಳಿಗೆ ತಯಾರಾಗುವವರು ಮಾತ್ರ ಅಲ್ಲಾಹನ ಅನುಗ್ರಹಗಳಿಗೆ ವಾರಸುದಾರರಾಗುವರು ಎಂದು ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಭರವಸೆ ನೀಡಿರುವರು.

ಹಝ಼್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ನಿಮ್ಮನ್ನು ವ್ಯರ್ಥಗೊಳಿಸುವನು ಎಂದು ನೀವು ಭಾವಿಸಬೇಡಿರಿ. ನೀವು ಅಲ್ಲಾಹನ ಕೈಯಿಂದ ನೆಲದಲ್ಲಿ ಬಿತ್ತಲ್ಪಟ್ಟ ಒಂದು ಬೀಜವಾಗಿದ್ದೀರಿ. ಈ ಬೀಜ ಬೆಳೆಯುವುದು, ಹಣ್ಣಾಗುವುದು, ಪ್ರತಿಯೊಂದು ಕಡೆಯಿಂದ ಇದರ ಶಾಖೆಗಳು ಹೊರಡುವುವು ಮತ್ತು ದೊಡ್ಡದಾದೊಂದು ಮರವಾಗುವುದು ಎಂದು ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ಮಾತನ್ನು ನಂಬುವವನು ಮತ್ತು ಮಧ್ಯದಲ್ಲಿ ಬರುವ ವಿಪತ್ತುಗಳನ್ನು ಭಯಪಡದವನು ಅನುಗ್ರಹೀತನು. ಏಕೆಂದರೆ ಆಪತ್ತುಗಳು ಮತ್ತು ಪರೀಕ್ಷಣೆಗಳು ಸಹ ಬರಬೇಕಾದದ್ದು ಆವಶ್ಯಕ. ಹೀಗೆ ಅಲ್ಲಾಹನು ನಿಮ್ಮನ್ನು ಪರೀಕ್ಷಿಸುವನು. ಯಾರು ತನ್ನ ಬೈಅತಿನ ವಾದದಲ್ಲಿ ಸತ್ಯವಂತನು ಮತ್ತು ಯಾರು ಸುಳ್ಳುಗಾರನು ಎಂದು ಅಲ್ಲಾಹನು ನೋಡುವನು. ಯಾರು ಪರೀಕ್ಷಣೆಯ ವೇಳೆ ಎಡವಿ ಬೀಳುತ್ತಾನೋ ಅವನು ಅಲ್ಲಾಹನಿಗೆ ಯಾವುದೇ ನಷ್ಟವನ್ನು ಉಂಟುಮಾಡುವುದಿಲ್ಲ. ದೌರ್ಭಾಗ್ಯವು ಅವನನ್ನು ನರಕದ ತನಕ ತಲುಪಿಸುವುದು. ಅವನು ಹುಟ್ಟದೇ ಇದ್ದರೆ ಅವನಿಗೆ ಒಳ್ಳೆಯದಾಗಿತ್ತು. ಆದರೆ ಕೊನೆಯ ತನಕ ಸಹನೆ ತೋರಿಸುವವರ ಮೇಲೆ ವಿಪತ್ತುಗಳ ಭೂಕಂಪ ಉಂಟಾಗುವುದು. ಆಪತ್ತುಗಳ ಬಿರುಗಾಳಿ ಬರುವುದು. ಸಮುದಾಯಗಳು ಅಪಹಾಸ್ಯ ಮಾಡುವುವು. ಲೋಕವು ಬಹಳ ಅನಿಷ್ಟತೆಯಿಂದ ಅವರೊಡನೆ ವರ್ತಿಸುವುದು. ಆದರೆ ಅವರು ಕೊನೆಗೆ ವಿಜಯಿಗಳಾಗುವರು. ಅನುಗ್ರಹಗಳ ಬಾಗಿಲುಗಳೂ ಅವರಿಗಾಗಿ ತೆರೆಯಲ್ಪಡುವುವು. ಭೌತಿಕತೆಯನ್ನು ಮಿಶ್ರನ ಮಾಡದ ವಿಶ್ವಾಸ, ಕಾಪಟ್ಯ ಮತ್ತು ಹೇಡಿತನದಿಂದ ಮಲಿನವಾಗಿರದ ವಿಶ್ವಾಸ, ಅನುಸರಣೆಯ ಯಾವುದೇ ಮಟ್ಟದಿಂದ ವಂಚಿತಗೊಳ್ಳದ ವಿಶ್ವಾಸ ಹೊಂದಿರುವ ಜನರು ಅಲ್ಲಾಹನ ಪ್ರಿಯ ಜನರಾಗಿರುವರು ಮತ್ತು ಅಂತಹವರ ಹೆಜ್ಜೆಯೇ ಸತ್ಯದ ಹೆಜ್ಜೆಯಾಗಿದೆ ಎಂದು ಅಲ್ಲಾಹನು ನನ್ನನ್ನು ಸಂಬೋಧಿಸುತ್ತಾ ಜಮಾಅತಿಗೆ ತಿಳಿಸಿದೆ. (ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ–20, ಪುಟ–309)

ತದನಂತರ ಮತ್ತೆ ಹೇಳೂತ್ತಾರೆ: ಅಲ್ಲಾಹನು ನನ್ನನ್ನು ಸಂಬೋಧಿಸಿ ಹೇಳುತ್ತಾರೆ ಹಲವಾರು ಘಟನೆಗಳು ಮತ್ತು ಆಪತ್ತುಗಳು ಭೂಮಿಗೆ ಇಳಿಯುವುದು. ಅವುಗಳಲ್ಲಿ ಕೆಲವು ನನ್ನ ಜೀವಿತದಲ್ಲಿ ಪ್ರಕಟವಾಗುವುವು ಮತ್ತು ಕೆಲವು ನನ್ನ ನಂತರ ಪ್ರಕಟವಾಗುವುವು. ಅಲ್ಲಾಹನು ಈ ಜಮಾಅತಿಗೆ ಸಂಪೂರ್ಣ ಪ್ರಗತಿಯನ್ನು ನೀಡುವನು. ಕೆಲವು ನನ್ನ ಕೈಗಳಿಂದ ಮತ್ತು ಕೆಲವು ನನ್ನ ನಂತರ. (ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ–20, ಪುಟ–303–304)

ಅಭಿವೃದ್ಧಿಗಳು ಆಗಲಿಕ್ಕೆ ಇವೆ. ಇನ್‌ಶಾ ಅಲ್ಲಾಹ್. ಅಲ್ಲಾಹನು ನಮಗೆ ಸದಾ ಸ್ಥಿರಚಿತ್ತತೆ ನೀಡಲಿ. ಜಮಾಅತಿನ ಪರಿಪೂರ್ಣ ಅಭಿವೃದ್ಧಿಯ ದೃಶ್ಯಗಳು ನಾವು ನಮ್ಮ ಕಣ್ಣುಗಳಿಂದ ನೋಡುವವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಅಲ್ಲಾಹನ ವಾಗ್ದಾನಗಳು ಈಡೇರುವ ದೃಶ್ಯಗಳು ನಾವು ಕಾಣುವಂತಾಗಲು ನಾವು ನಮ್ಮ ಪ್ರತಿಜ್ಞೆಗಳನ್ನು ಈಡೇರಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಮ್ಮ ಆರಾಧನೆಗಳು, ನಮ್ಮ ನಮಾಝ್‌ಗಳು ಮತ್ತು ನಮ್ಮ ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವಂತಹದ್ದಾಗಲಿ. ನಾವು ಖಿಲಾಫತಿನ ಸರಿಯಾದ ಅರಿವು ಪಡೆಯುವವರಾಗಲಿ. ನಮ್ಮ ಸಂತಾನಗಳು ಈ ಅನುಗ್ರಹದಿಂದ ಪ್ರಯೋಜನ ಪಡೆಯುವಂತಾಗಲು ನಾವು ಇದರ ಬಗ್ಗೆ ನಮ್ಮ ಸಂತಾನಗಳಿಗೆ ಹೇಳುವವರಾಗಲಿ.

ಇಂದು ಪುನಃ ದುಆಗಳನ್ನು ಮಾಡಲು ನಾನು ಮನವಿ ಮಾಡುತ್ತೇನೆ. ಪಾಕಿಸ್ತಾನದ ಅಹ್ಮದಿಯರಿಗಾಗಿ ಮತ್ತು ಎಲ್ಲೆಲ್ಲ ಪೀಡಿತರಾದ ಅಹ್ಮದಿಯರು ಇರುವರೋ ಅವರಿಗಾಗಿ ದುಆ ಮಾಡಿರಿ. ಪೆಲಸ್ತೀನಿನ ಮುಸ್ಲಿಮರ ಸಮೇತ ದೌರ್ಜನ್ಯಕ್ಕೆ ಗುರಿಯಾಗಿರುವ ಎಲ್ಲ ಮುಸ್ಲಿಮರಿಗಾಗಿ ದುಆ ಮಾಡಿರಿ. ಅಲ್ಲಾಹನು ಎಲ್ಲರ ಕಷ್ಟತೆಗಳನ್ನು ದೂರಮಾಡಲಿ. ಅಹ್ಮದಿಯರಿಗೆ ಹಝ಼್ರತ್ ಮಸೀಹ್ ಮೌಊದ್‌ರ(ಅ) ಅಧ್ಯಾಪನೆಗಳ ಪ್ರಕಾರ ಸರಿಯಾಗಿ ನಡೆಯಲು ಸೌಭಾಗ್ಯ ಸಿಗಲಿ. ಅವರು ನೈಜ ಅಹ್ಮದಿಯರಾಗಲಿ. ಹಝ಼್ರತ್ ಮಸೀಹ್

ಮೌಊದ್‌ರನ್ನು(ರ) ಅರಿಯದ ಮುಸ್ಲಿಮರಿಗೆ ಅಲ್ಲಾಹನು ಅರಿಯುವ ಮತ್ತು ಬೈಅತ್ ಮಾಡುವ ಸೌಭಾಗ್ಯ ನೀಡಲಿ. ನಾವು ಬೇಗನೇ ಇಸ್ಲಾಂ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಾವುಟವನ್ನು ಹಾರಿಸುತ್ತಾ ಲೋಕದೆಲ್ಲಡೆ ಏಕದೇವವಿಶ್ವಾಸ ಸ್ಥಾಪನೆಯಾಗುವುದನ್ನು ನೋಡುವವರಾಗಲಿ. ಆಮೀನ್

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಒಬ್ಬನು ಅಲ್ಲಾಹನ ಪ್ರಕಾಶವಾಗಿದೆ ಎಂದು, ಒಬ್ಬನು ಹಿಂದೂ ಧರ್ಮವನ್ನು, ಇನ್ನೊಬ್ಬನು ಇಸ್ಲಾಮ್ ಧರ್ಮವನ್ನು ಅಲ್ಲಾಹನ ಪ್ರಕಾಶ ಎನ್ನುತ್ತಾನೆ.

ಈ ವಚನದಲ್ಲಿ ತಿಳಿಸಲಾಗಿದ್ದೇನೆಂದರೆ ಆಚರಣೆಗಳು, ರೀತಿ ರಿವಾಜುಗಳು ಮತ್ತು ಸಿಪ್ಪೆಗಳು ಅಲ್ಲಾಹನ ಪ್ರಕಾಶ ಎನ್ನಲಾಗದು. ಪ್ರಕಾಶವೆಂದರೆ ಅಲ್ಲಾಹನತ್ತ ಹೋಗುವ ಮಾರ್ಗವಾಗಿದೆ. ಯಾರ ಹೆಜ್ಜೆ ಅಲ್ಲಾಹನತ್ತ ಸಾಗುವುದಿಲ್ಲವೋ ಅವನು ಪ್ರಕಾಶ ಪಡೆಯುವನು ಎಂದು ಯಾವ ರೀತಿಯಿಂದಲೂ ಹೇಳಲಾಗದು. ಅಲ್ಲಾಹನತ್ತ ಸಾಗುವವನೇ ಅಲ್ಲಾಹನ ಪ್ರಕಾಶ ಪಡೆಯುವವನು. ಅಲ್ಲಾಹನ ಅಸ್ತಿತ್ವ ಕುರಿತು ಇಲ್ಲಿ ಎರಡು ಗುಣಗಳನ್ನು ವಿವರಿಸಲಾಗಿದೆ. ಅಝೀಝ್ ಮತ್ತು ಹಮೀದ್ (ಪ್ರತಾಪಶಾಲಿ ಮತ್ತು ಸ್ತುತ್ಯರ್ಹನು) ಈ ಎರಡು ಗುಣಗಳನ್ನು ಇಲ್ಲಿ ಏಕೆ ಆರಿಸಿಕೊಳ್ಳಲಾಗಿದೆ ಎಂದರೆ ಒಂದು ಸಕ್ರಿಯತೆಯನ್ನು ಬಿಂಬಿಸುತ್ತದೆ. ಇನ್ನೊಂದು ಜ್ಞಾನವನ್ನು, ಪ್ರತಾಪಶಾಲಿ ದೇವನನ್ನು ಆಧರಿಸಿ ಮನುಷ್ಯನು ಶತ್ರುಗಳ ಮೇಲೆ ವಿಜಯ ಸಾಧಿಸಿದರೆ, ಬಾಹ್ಯ ಅಂಧಕಾರಗಳು ಅಂದರೆ ದುಃಖ ದುಮ್ಮಾನಗಳು ದೂರವಾಗುತ್ತವೆ. ಅಂತೆಯೇ ಹಮೀದ್ ಸ್ತುತ್ಯರ್ಹನಾದ ಅಲ್ಲಾಹನ ಸಂಪರ್ಕದಿಂದ ಮನುಷ್ಯನು ತನ್ನ ಆಂತರಿಕ ಅಂಧಕಾರವನ್ನು ಅಂದರೆ ಸಂಶಯ, ಅನುಮಾನ ಮತ್ತು ಅಜ್ಞಾನತೆಯನ್ನು ದೂರ ಮಾಡುತ್ತಾನೆ.

ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮುಲಕ ಈ ಎರಡೂ ಕಾರ್ಯಗಳಾಗಿವೆ. ಅರಬರ ಅವನತಿ, ಅಪಮಾನವೂ ದೂರವಾಯಿತು. ಅವರ ಅಜ್ಞಾನತೆ ಮತ್ತು ಸಹಭಾಗಿತ್ವ (ಶಿರ್ಕ್) ಹಾಗೂ ನೈತಿಕ ದುರ್ಬಲತೆಗಳು ದೂರವಾದವು. ಒಂದೆಡೆ ಅವರು ಲೋಕದ ರಾಜರಾದರೆ, ಇನ್ನೊಂದೆಡೆ ಅವರೆಲ್ಲರೂ ಲೋಕಕ್ಕೆ ಗುರುವಾದರು. ರಸೂಲೆ ಕರೀಂ(ಸ) ಅವರು ಆಗಮಿಸಿದ ಪೂರ್ವದಲ್ಲಿನ ಅರಬರ ಸ್ಥಿತಿ ಮತ್ತು ನಂತರ ಪರಿವರ್ತನೆಗೊಂಡ ಸ್ಥಿತಿ ಐತಿಹಾಸಿಕ ಘಟನೆಗಳನ್ನು ತಿರುವಿ ಹಾಕಿದಾಗ ಅಂದಾಜಿಸಬಹುದು. ಹಝ್ರತ್ ಉಮರ್(ರ) ರವರ ಕಾಲಘಟ್ಟದಲ್ಲಿ ಇರಾನಿನ ಮೆಲೆ ದಂಡೆತ್ತಿ ಹೋದಾಗ ಇರಾನಿನ ಬಾದಶಾಹನು ತನ್ನ ವರಿಷ್ಠ ಸೈನ್ಯಾಧಿಕಾರಿಯನ್ನು ಕರೆದು ಹೇಳಿ ಕಳುಹಿಸಿದನು. ಆ ಜನರನ್ನು ಒಂದಿಷ್ಟು ಬಹುಮಾನಗಳನ್ನು ನೀಡುವ ವಾಗ್ದಾನ ಮಾಡಿ ಯುದ್ಧ ಕೊನೆಗೊಳಿಸಿರಿ. ಬಹುಮಾನವು ತುಂಬಾ ಲಘುವಾದದ್ದಾಗಿತ್ತು. ಅಂದರೆ ಸಿಪಾಯಿಯೊಬ್ಬನಿಗೆ ಒಂದೊಂದು, ಎರಡೆರಡು ದೀನಾರ್. ಈ ಘಟನೆಯಿಂದ ತಿಳಿದುಬರುವುದೇನೆಂದರೆ ಅರಬರು ತಮ್ಮ ನೆರೆಯ ಸಮುದಾಯಗಳ ದೃಷ್ಟಿಯಲ್ಲಿ ಅತ್ಯಂತ ಬಡವರು, ನಿರ್ಗತಿಕರು ಮತ್ತು ಅಂಜುಬುರುಕರು ಎಂದಾಗಿತ್ತು. ಆದರೆ ಇಸ್ಲಾಮ್ ಧರ್ಮವು ಅವರನ್ನು ಎಲ್ಲಿಗೆ ತಂದು ನಿಲ್ಲಿಸಿತು ಎಂದು ಇದರಿಂದ ಸ್ಪಷ್ಟವಾಗುವುದು. ಅವರು ಕೇವಲ ಇರಾನನ್ನು ಜಯಿಸಲಿಲ್ಲ. ಬದಲು ಸೀರಿಯಾ, ಪಿಲಿಸ್ತೀನ್, ಮಿಸ್ರ್, ಅನಾತೋಲಿಯಾ, ಆರ್ಮೇನಿಯಾ, ಇರಾಕ್, ಉತ್ತರ ಆಫ್ರಿಕಾ, ಹಫ್ಘಾನಿಯಾ, ಅಫ್ಘಾನಿಸ್ತಾನ್, ಹಿಂದ್ ಮತ್ತು ಚೀನಾವರೆಗಿನ ವಿಜಯವು ಒಂದೇ ಶತಮಾನದ ಒಳಗೆ ಸಾಧಿಸಿದರು.

ಅತಿ ಬಡವರು, ಮಧ್ಯ ವರ್ಗದವರಾದ ಸಹಾಬರು ಯಾವ ರೀತಿಯ ಶ್ರೀಮಂತರಾದರೆಂದರೆ, ಓರ್ವ ಸಹಾಬಿ ಅಬ್ದುರ್ ರಹ್ಮಾನ್ ಓಫ್ ಅಗಲಿ ಹೋದಾಗ ಅವರ ಸಂಪತ್ತು ಎರಡೂವರೆ ಕೋಟಿಯಾಗಿತ್ತು. ಇಂದಿಗೆ ಅದು ತುಲನೆ ಮಾಡಿ ನೋಡಿದರೆ ಬಹು ದೊಡ್ಡ ಸಂಪತ್ತಾಗುತ್ತದೆ. ಏಕೆಂದರೆ ಅಂದು ರೂಪಾಯಿಯ ಬೆಲೆ ತುಂಬ ಹೆಚ್ಚಾಗಿರುತ್ತಿತ್ತು.

ಎರಡನೆಯ ಬದಲಾವಣೆಯು ಸ್ಪಷ್ಟವಿದೆ. ಅರಬಿನ ಜನರು ಬರವಣಿಗೆಯನ್ನು ಒಂದು ದೋಷ ಎಂದು ಭಾವಿಸುತ್ತಿದ್ದರು. ಮತ್ತು ಯಾವ ವಿಧದ ಜ್ಞಾನವು ಅವರಲ್ಲಿರಲಿಲ್ಲ. ಇಡೀ ಲೋಕದ ಜ್ಞಾನಗಳನ್ನು ಪಡೆದರು. ಇತಿಹಾಸದ ಬುನಾದಿ ಅವರು ಹಾಕಿದರು. ಸಾಹಿತ್ಯ, ಛಂಧರಸ, ಅರ್ಥಕೋಶ, ಶಬ್ಧಕೋಶವನ್ನು ಅವರು ಉನ್ನತ ಮಟ್ಟಕ್ಕೆ ತಲುಪಿಸಿದರು. ಫಿಖ ಮತ್ತು ತತ್ವಜ್ಞಾನ, ಮನ್‌ಚಖ್, ಹಿಕ್‌ಮತ್, ವೈದ್ಯಕೀಯ ಮತ್ತು ರಾಜಕೀಯ ಮತ್ತು ಇಂಜಿನಿಯರಿಂಗ್ ಹಾಗೂ ಗಣಿತ ಅಂಕೆ ಸಂಖ್ಯೆ, ಅರ್ಥಶಾಸ್ತ್ರ, ವಿಜ್ಞಾನ, ಸಂಶೋಧನೆ ಹತ್ತು ಹಲವು ಜ್ಞಾನಗಳನ್ನು ಕೆಳಮಟ್ಟದಿಂದ ಉನ್ನತಮಟ್ಟಕ್ಕೆ ತಲುಪಿಸಿದರು. ಇಂದು ಯೂರೋಪಿಯನ್ ಸಂಶೋಧಕರು ಸಹ ಒಪ್ಪಿಕೊಳ್ಳುತ್ತಾರೆ. ಒಂದು ವೇಳೆ ಅರಬ್ ಮುಸಲ್ಮಾನರು ಇರದಿರುತ್ತಿದ್ದರೆ ಇಂದು ಲೋಕಜ್ಞಾನದ ಈ ಮಟ್ಟಕ್ಕೆ ತಲುಪುತ್ತಿರಲಿಲ್ಲ. ಅಷ್ಟೇ ಅಲ್ಲ ಆಧ್ಯಾತ್ಮಿಕತೆಯಲ್ಲೂ ಅರಬರು ಸಾಧಿಸಿದ ಉನ್ನತಿ ಅದರ ಉದಾಹರಣೆ ಲೋಕದ ಆರಂಭದಿಂದ ಹಿಡಿದು ಇಲ್ಲಿಯವರೆಗೂ ಯಾವ ಸಮುದಾಯದಲ್ಲೂ ಕಾಣಸಿಗದು. **(ತಫ್ಸೀರ್ ಕಬೀರ್ ಸಂ, 3 ಪುಟ 438-439 ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅವರ ಧೈರ್ಯ ಇಲ್ಲಿಂದಲೂ ಕುಂದಲು ಆರಂಭವಾಯಿತು. ಸತ್ಯದ ಭಯ ಅವರನ್ನು ಹುಚ್ಚರಂತೆ ಮಾಡಿಬಿಟ್ಟಿತ್ತು. ಆಗ ಅವರು ಇನ್ನೊಬ್ಬ ಅಳಿಯನ ಬಳಿಗೆ ಹೋದರು. ಅವರು ಫಿರೋಜಪುರದಲ್ಲಿರುತ್ತಿದ್ದರು. ಬಹುಶಃ ಈ ರೀತಿ ಅವರು ತಮ್ಮ ನಿಕಟ ಸಂಬಂಧಿಕರೆಡೆ ಬರುವ ಉದ್ದೇಶ ಒಂದು ವೇಳೆ ನನ್ನ ಈ ಗೌಪ್ಯ ರುಜುಪಡಿಸುವಿಕೆ ಕೆಲಸಕ್ಕೆ ಬರಲಿಲ್ಲ. ಮತ್ತು ನಾನು ತೀರಿ ಹೋದರೆ, ಕನಿಷ್ಟ ಮಟ್ಟ ಸಂಬಂಧಿಕರನ್ನು ಬೇಟಿಯಾದರು ಮಾಡಿಕೊಳ್ಳೋಣ ಎಂದಾಗಿತ್ತೇನು. ಆ ಕಾರಣದಿಂದ ಹಾಗೂ ಹೀಗೂ ಪಿರೋಜಪುರ ತಲುಪಿದರು. ಸತ್ಯದ ಭಯ ಆವರಿಸಿದ ಕಾರಣ ಅವರಿಗೆ ಯಾವತ್ತೂ ದೇವರ ಶಿಕ್ಷೆಗೆ ಗುರಿಯಾಗುವ ಲಕ್ಷಣಗಳು ಕಂಡುಬರುತ್ತಿದ್ದವು. (ಝಿಯಾಉಲ್ ಹಖ್, ರೂಹಾನಿ ಖಝಾಈನ್, ಸಂಪುಟ-9, ಪುಟ-269)

ಇಲ್ಲಿಯೂ ಭಯ ವಿಪರೀತಕ್ಕೆ ಹೋದಾಗ ರೋಗ ಮರುಕಳಿಸದಂತೆ ಮತ್ತೆ ಲೂಧಿಯಾನದಲ್ಲಿ ಕಂಡಂತಹ ದೃಶ್ಯವು ಕಾಣುವಂತಾಯಿತು. ಆದರೆ ಈ ಸಲದ ದೈವಿಕ ಚಮತ್ಕಾರ ಅತ್ಯಂತ ಪ್ರಭಾವಶಾಲಿಯಾಗಿತ್ತು ಅದು ಆಥಮನ ಮನಸ್ಸನ್ನು ಕದಲಿಸಿಬಿಟ್ಟಿತು. ಅಂದ ಹಾಗೆ ಅವರು ಬರೆಯುತ್ತಾರೆ. ಮತ್ತೆ ನಾನು ಫೋರೋಜಪುರದಲ್ಲಿ ಕಂಡಿದ್ದು, ಕೆಲ ಮನುಷ್ಯರು ಖಡ್ಗಗಳು ಅಥವಾ ಬರ್ಚಿಗಳೊಂದಿಗೆ ಧಾವಿಸಿ ಬಂದರು. ಅಂತೂ ಬಲ್ಲ ಮೂಲಗಳಿಂದ ತಿಳಿದು ಬಂದ ವಿಷಯವೇನೆಂದರೆ ಈ ಸಲ ಅತಿಭಯಂಕರವಾದ ಪರಿಣಾಮ ಅವರ ಮೇಲಾಯಿತು. ಅವರು ಕನಸ್ಸಿನಲ್ಲಿ ಸಹ ಭಯಪಡುತ್ತಿದ್ದರು. ಈ ಅವಧಿಯಲ್ಲಿ ಒಂದಕ್ಷರವೂ ಇಸ್ಲಾಮಿನ ವಿರುದ್ಧ ಬಳಸಲಿಲ್ಲ. (ಝಿಯಾಉಲ್ ಹಖ್ ರೂಹಾನಿ ಖಝಾಈನ್, ಸಂಪುಟ-9, ಪುಟ-270) ಅವರ ಮೇಲೆ ಯಾವ ರೀತಿಯ ದುಃಖದ ಪರ್ವತಗಳು ಎರಗಿ ಬಂದವು ಎಂದರೆ ಅವರು ತಮ್ಮ ಜೀವನಪೂರ್ತಿ ಎಂದೂ ಕಂಡಿರಲಿಲ್ಲ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ದಿಠ ಸತ್ಯ ಬಯಸುವವರೆ ನಿಶ್ಚಯವಾಗಿ ತಿಳಿದುಕೊಳ್ಳಿರಿ. ನರಕಾಗ್ನಿಯಲ್ಲಿ ಬೀಳುವ ಭವಿಷ್ಯವಾಣಿ ಪೂರ್ಣಗೊಂಡಿದೆ, ಇಸ್ಲಾಮಿನ ವಿಜಯವಾಗಿದೆ ಮತ್ತು ಕ್ರೈಸ್ತರಿಗೆ ಸೋಲುಂಟಾಗಿದೆ. ಹೌದು ಒಂದು ವೇಳೆ ಮಿಸ್ಟರ್ ಅಬ್ದುಲ್ಲ ಆಥಮನು ತಮ್ಮ ದುಃಖ ದುಮ್ಮಾನಗಳ ಪ್ರಭಾವ ತೋರಿಸದಿರುತ್ತಿದ್ದರೆ, ತಮ್ಮ ಕೇಂದ್ರ ಬಿಟ್ಟು ಅಲ್ಲಲ್ಲಿ ಅಲೆದಾಡುತ್ತಿರಲಿಲ್ಲವಾದರೆ, ಅವರ ಹೃದಯದಲ್ಲಿ ಭಯ, ಆತಂಕ ಮತ್ತು ಗಾಬರಿಯ ಲಕ್ಷಣಗಳ ಪ್ರಭಾವ ಬೀರದಂತಾಗುತ್ತಿದ್ದರೆ, ತಮ್ಮ ಸಹಜ ಪ್ರವೃತ್ತಿಯಂತೆ ಸಂತೋಷ ಮತ್ತು ಸ್ಥಿರಚಿತ್ತತೆಯಿಂದ ಮೊದಲಿನಂತೆಯೇ ಕಳೆಯುವಂತಾಗಿದ್ದರೆ, ನಿಸ್ಸಂಶಯವಾಗಿ ಹೇಳಬಹುದಾಗಿತ್ತು. ಅವರು ನರಕಾಗ್ನಿಯಲ್ಲಿ ಬೀಳುವುದರಿಂದ ದೂರವಾದರು. ಆದರೆ ಈಗ ಅವರ ಉದಾಹರಣೆ ಪ್ರಳಯ ಬರುವುದಕ್ಕಿಂತ ಮುಂಚೆ ಪ್ರಳಯ ಉಂಟಾಗುವಂತಾಗಿದೆ. ಅವರ ಮೇಲೆ ದುಃಖ ದುಮ್ಮಾನಗಳ ಯಾವ ಪರ್ವತಗಳು ಎರಗಿ ಬಂದಿವೆ ಎಂದರೆ ಅವರು ತಮ್ಮ ಜೀವನ ಪೂರ್ತಿಯಲ್ಲಿ ಎಂದೂ ಕಂಡಿರಲಿಲ್ಲ. ಅಂದ ಹಾಗೆ ಅವರು ಇವೆಲ್ಲ ದಿನಗಳು ವಾಸ್ತವದಲ್ಲಿ ನರಕಾಗ್ನಿಯಲ್ಲಿ ಕಳೆದರು ಎಂಬುದು ಸತ್ಯವಲ್ಲವೆ. ನೀವು ಒಂದೆಡೆ ನಮ್ಮ ಭವಿಷ್ಯವಾಣಿ ಪದಗಳನ್ನು ಓದಿರಿ, ಇನ್ನೊಂದೆಡೆ ಅವರ ಮೇಲೆ ಬಂದ ಆಪತ್ತುಗಳನ್ನು ಪರೀಕ್ಷಿಸಿರಿ. ಆಗ ನಿಮಗೆ ಯಾವ ಸಂಶಯಬಾರದದು, ಅವರು ನಿಸ್ಸಂಶಯವಾಗಿ ನರಕಾಗ್ನಿಯಲ್ಲಿ ಬಿದ್ದರು. ಅವಶ್ಯವಾಗಿ ಬಿದ್ದರು. ಅವರ ಮನಸ್ಸಿನ ಮೇಲೆ ಉಂಟಾದ ಭಯ ದುಃಖ ಆತಂಕವನ್ನು ನಾವು ಅಗ್ನಿಯ ಶಿಕ್ಷೆಗಿಂತಹೂ ಕಡಿಮೆ ಎನ್ನಲು ಸಾಧ್ಯವಿಲ್ಲ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್ ಸಂಪುಟ-9, ಪುಟ-7)

**ಅಮೃತ್ಸರ, ಲೂಧಿಯಾನ, ಫಿರೋಜಪುರಗಳಲ್ಲಾದ ಮೂರು ಹಲ್ಲೆಗಳ ವಾಸ್ತವ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ಪ್ರೇಕ್ಷಕರೇ! ಈ ಮೂರು ಹಲ್ಲೆಗಳನ್ನು ಲಘುವಾಗಿ ಪರಿಗಣಿಸಬೇಡಿ, ಸರಿಯಾಗಿ ಯೋಚಿಸಿ ವಾಸ್ತವ ಏನಾಗಿದೆ ಎಂದು. ಮೊದಲು ಕಂಡ ದೃಶ್ಯ ವಾಸ್ತವದಲ್ಲಿ ತರಬೇತಿಗೊಂಡ ಹಾವಾಗಿತ್ತೇ. ಹಿಂದೆ ಕಂಡಿದ್ದ ಶಸ್ತ್ರಧಾರಿ ಯೋಧರು ನಮ್ಮ ಜಮಾಅತಿನ ಯೋಧರಾಗಿದ್ದರೆ, ಅವರನ್ನು ಆಥಮರು ಏಕೆ ಹಿಡಿಯಲು ವಿಫಲರಾದರು. ಅವರ ಅಳಿಯಂದಿರಿಂದಲೂ ಏನು ಮಾಡಲಾಗಲಿಲ್ಲ. ಅವರ ಶಿಕ್ಷಕ ದಳಗಳಿಂದಲೂ ಎದುರಿಸಲು ಆಗಲಿಲ್ಲ. ಮತ್ತು ಆಶ್ಚರ್ಯ, ಅತಿ ಆಶ್ಚರ್ಯದ ಸಂಗತಿ ಎಂದರೆ ಈ ಜನರು ಅನಧಿಕೃತ ರೀತಿಯಲ್ಲಿ ಆಯುಧಗಳೊಂದಿಗೆ ಹಲವು ಸಲ ರೈಲಿನಲ್ಲಿ ಹತ್ತಿದರು. ಪೇಟೆ ಪೇಟೆಯಲ್ಲಿ ತಿರುಗಾಡಿದರು. ಆಥಮ್ ಸಾಹಿಬರ ಆವರಣದಲ್ಲಿ ಕಾವಲುದಾರರಾದರು.

ಆದರೂ ಆಥಮ್ ಸಾಹಿಬರಿಗೆ ಹೊರತು ಯಾರ ಕಣ್ಣಿಗೆ ಕಾಣಲು ಸಾಧ್ಯವಾಗಲಿಲ್ಲ. ಇವೆಲ್ಲ ಸರಣಿ ನೋಡುವಾಗ ಸಾಬೀತಾಗುವುದಿಲ್ಲವೇ? ಇವೆಲ್ಲ ನಿಜ ಅರ್ಥದಲ್ಲಿ ಆಧ್ಯಾತ್ಮಿಕ ದೃಶ್ಯವಾಗಿತ್ತು. ಅದು ಆಥಮನ ಮನವನ್ನು ಸತ್ಯದೆಡೆ ರುಜುಪಡಿಸುವಂತೆ ಮಾಡಿತು. ಮತ್ತು ಅವರ ಹೃದಯ ಭಯದಿಂದ ತುಂಬಿತು ಹಾಗೂ ಬಾಯಿಗೆ ಮುದ್ರೆ ಜಡಿದಂತಾಯಿತು. ಮೊದಲ ಹಲ್ಲೆಯಲ್ಲಿಯೇ ಪೋಲಿಸ್ ಠಾಣೆಯಲ್ಲಿ ದೂರು ನೀಡುವುದು ಅವರ ಕರ್ತವ್ಯವಾಗಿತ್ತು. ಸರಕಾರಕ್ಕೆ ಸುದ್ದಿ ಕೊಡಬೇಕಿತ್ತು. ಅವರು ಯಾರಾಗಿದ್ದರು. ಹೇಗಿದ್ದರು ಎಲ್ಲ ವಿವರ ಸರಕಾರಿ ಅಧಿಕಾರಿಗಳಿಗೆ ತಿಳಿಸಬೇಕಾಗಿತ್ತು. ಸರಕಾರ ಜಾಹೀರಾತು ನೀಡಿ ಆ ದುಷ್ಕರ್ಮಿಗಳನ್ನು, ಅಪರಾದಿಗಳನ್ನು ಹಿಡಿದು ಶಿಕ್ಷೆಗೆ ಒಳಪಡಿಸಬಹುದಾಗಿತ್ತು. (ಝಿಯಾಉಲ್ ಹಖ್, ರೂಹಾನಿ ಖಝಾಇನ್, ಸಂಪುಟ-9, ಪುಟ-375)

**ಅವರ ಸಂಬಂಧಿಕರಿಗೆ ಅದೆಲ್ಲ ಆಥಮ್‌ನ ಭಾವನೆಗಳಷ್ಟೇ ಎಂದು ಒಪ್ಪಿಕೊಂಡರು.**

ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ಹೇಳಿದರು. ನಮ್ಮ ಅರಿವಿಗೆ ಬಂದಿದೆ. ಅವರ ಮಿತ್ರರೇ ಹೇಳಿದ್ದಾರೆ, ಹೆದರಿಕೆಯ ಪ್ರಾಬಲ್ಯದಿಂದ ಅವರಲ್ಲಿ ಉಂಟಾದ ಅವು ಅವರ ಭಾವನೆಗಳೇ ಆಗಿವೆ. ಅವು ಹಾವು ಅಥವಾ ಶಸ್ತ್ರಧಾರಿ ಸವಾರರು ಅಥವಾ ಪೇದೆಗಳ ರೂಪದಲ್ಲಿ ಕಾಣುತ್ತವೆ. ಇಲ್ಲದಿದ್ದರೆ ಮೂರು ಸಲ ಮೂರು ವಿವಿಧ ಸ್ಥಳಗಳಲ್ಲಿ ಕಂಡು ಬಂದರು ಸಹ ಏಕೆ ಹಿಡಿಯಲಾಗಲಿಲ್ಲ. ಅಲ್ಲದೇ ಅವರ ಸುಳಿವು ಸಹ ದೊರೆಯಲಿಲ್ಲ. ಮತ್ತು ಪ್ರತಿಸಲ ಕೇವಲ ಆಥಮನಿಗೆ ಮಾತ್ರ ಕಾಣಸಿಗುವುದು. ವಿವೇಕತೆಗೆ ಮೀರಿದ ವಿಷಯವಾಗಿದೆ. ಇವೆಲ್ಲ ಮಾತುಗಳು ಅವರ ಸಹಧರ್ಮೀಯರಾದ ಕೆಲವರು ತಮ್ಮ ಸಭೆಗಳಲ್ಲಿ ಹೇಳಿಕೊಂಡು ನಗುತ್ತಾರೆ. ಆಥಮ್ ಸಾಹಿಬರ ಭಯವನ್ನು ಗೇಲಿ ಮಾಡುತ್ತಾರೆ. (ಅದೇ ಪುಟ 287).

**ಜಮಾಅತಿನ ಜನರ ಮೇಲೆ ಹಲ್ಲೆಯ ಆರೋಪ ಅಪ್ಪಟ ಸುಳ್ಳು ಮತ್ತು ಬುದ್ಧಿಗೆ ಎಟುಕದ ಮಾತಾಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ಆದರೆ ವಿಷಾದದ ಸಂಗತಿ ಎಂದರೆ ಆಥಮ್ ಸಾಹಿಬರು ಅಮೃತ್ಸರದಲ್ಲಿ ಹಾವನ್ನು ಹಿಡಿಯಲು ವಿಫಲಗೊಂಡರು. ಅದನ್ನು ಹೊಡೆದು ಹಾಕಲು ಸಾಧ್ಯವಾಗಲಿಲ್ಲ. ಅದೇ ರೀತಿಯ ವಿಫಲತೆ ಆಥಮ್ ಸಾಹೇಬರಿಗೆ ಇಲ್ಲಿಯೂ (ಲೂಧಿಯಾನದಲ್ಲಿ) ಉಂಟಾಯಿತು. ಅದಾಗ್ಯೂ ಪೋಲೀಸರ ವ್ಯವಸ್ಥೆ ಮತ್ತು ಅವರ ಅಳಿಯಂದಿರ ಕಾಳಜಿ ಅಮೃತ್ಸರಕ್ಕಿಂತ ಹೆಚ್ಚಾಗಿತ್ತು.

ಆಥಮ್ ಸಾಹೇಬರಂತಹ ಅನುಭವಿ ಸರಕಾರಿ ನೌಕರರು, ಅವರ ಒಂದು ದೀರ್ಘ ಅವಧಿಯವರೆಗೆ ಎಕ್ಸ್ಟ್ರ ಅಸಿಸ್ಟೆಂಟ್ ಆಗಿ ಕೆಲಸ ನಿರ್ವಹಿಸಿದರು. ಅವರಿಗೆ ಇಷ್ಟು ಸಾಧ್ಯವಾಗಲಿಲ್ಲವೇ? ಸಿವಿಲ್ ಕಾನೂನಿನ ಪ್ರಕಾರ, ನಮ್ಮ ಬರವಣಿಗೆಯನ್ನು ಸಾಕ್ಷಿಯನ್ನಾಗಿ ಮಾಡಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದಾಗಿತ್ತು. ಏಕೆಂದರೆ ಅವರ ಸ್ಥಿತಿ ಹತ್ಯೆಯಾಗುವವರೆಗೆ ಬಂದು ಮುಟ್ಟಿತ್ತು. ಇಂತಹ ಅನುಭವಿಯೋರ್ವರು ಈ ರೀತಿ ಮೊಕದ್ದೊಮೆ ಹೂಡಿ ಹಾಯಾಗಿ ಲೂಧಿಯಾನದಲ್ಲಿ ಮಲಗ ಬಹುದಾಗಿತ್ತು.

ಅವರ ಹತ್ಯೆಯ ದೃಷ್ಟಿಯಿಂದಲೇ ಅವರ ಮೇಲೆ ಹಲ್ಲೆ ಮಾಡಲಾಗಿತ್ತು ಎಂಬ ವಿಷಯ ಸಣ್ಣ ಮಾತೇನೂ ಅಲ್ಲ. ಇಂತಹ ಘೋರವಾದ ಘಟನೆಯನ್ನು ಅವರಿಗೆ ಕೆಲವು ಪತ್ರಿಕೆಗಳಿಗಾದರೂ ಸುದ್ದಿ ಕೊಡಲು ಆಗಲಿಲ್ಲ. ಇವೆಲ್ಲಾ ಮಾತುಗಳನ್ನು ಆ ಸಮಯವೆಲ್ಲ ಕಳೆದು ಹೋದ ನಂತರ ಹದಿನೈದು ತಿಂಗಳ ನಂತರ ಹೇಳಬೇಕೆಂದರೆ ಏನರ್ಥ. ಆದರೂ ಸಹ ಅವರ ಮಿತ್ರರು ಅವರಿಗೆ ಈಗಲಾದರೂ ಮೊಕದ್ದೊಮೆ ಹೂಡಿ ಎಂದು ಹೇಳಿದರು. ಆದರೆ ಆಥಮ್ ಸಾಹಿಬರು ತಿಳಿದುಕೊಂಡಿದ್ದರು. ಇವೆಲ್ಲಾ ದೈವಿಕ ಕಾರ್ಯಗಳಾಗಿವೆ. ಮೊಕದ್ದಮೆ ಹೂಡುವುದೆಂದರೆ ತನ್ನ ವಿನಾಶಕ್ಕೆ ಆಹ್ವಾನಿಸಿದಂತೆಯೇ ಸರಿ ಎಂದು. ಆದಾಗ್ಯೂ ತನ್ನ ಭಯ ಮತ್ತು ರುಜುಪಡಿಸುವಿಕೆಯನ್ನು ಇಷ್ಟರ ಮಟ್ಟಿಗೆ ಗೌಪ್ಯವಾಗಿಟ್ಟದ್ದು ಸಹ ಒಂದು ಅಪಾಯಕರ ಅಪರಾಧವಾಗಿದೆ. ಅವರು ಅಲ್ಲಾಹನ ಉಪಕಾರವನ್ನು ನೆನಪಿಟ್ಟಿಲ್ಲ. ಆದುದರಿಂದ ಅವರು ಡಾ॥ ಕ್ಲಾರ್ಕ್ ಒತ್ತಾಯ ಮಾಡಿದರೂ ಮೊಕದ್ದಮ್ಮೆ ಹೂಡಲಿಲ್ಲ. (ಅದೇ ಪುಟ 288)

**ಜಮಾಅತ್ ಕಡೆಯಿಂದ ಹಲ್ಲೆಯ ಆರೋಪ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ನಿರಾಕರಣೆಗಾಗಿ ನೀಡಿದ ಸಾಕ್ಷ್ಯಗಳು**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನಮ್ಮ ಜಮಾಅತಿನ ಮೇಲೆ ಈ ಮೂರೂ ಹಲ್ಲೆಗಳ ಆರೋಪ ಮಾಡುವುದು ನಮ್ಮ ವಿಶ್ವಾಸದ ಮೇಲೆ ದೌರ್ಜನ್ಯ ಎಸಗಿದಂತೆ ಮತ್ತು ಇದು ಆಥಮನ ಸುಳ್ಳಿಗೆ ಬಹು ದೊಡ್ಡ ಸಾಕ್ಷಿಯಾಗಿದೆ. ಏಕೆಂದರೆ ನಮ್ಮ ಜಮಾಅತಿನಲ್ಲಿ ಪ್ರತಿಯೊಬ್ಬನು ಅರಿತಿದ್ದಾನೆ. ಇಂತಹ ಹಲ್ಲೆಗಳ ಶಿಕ್ಷಣ ಅವರಿಗೆ ನೀಡಲಾಗಿಲ್ಲ. ಅಲ್ಲದೇ ಇಂತಹ ನೀಚ ಸಲಹೆ ವಿಚಾರ ಎಂದೂ ಈ ಜಮಾಅತಿನಲ್ಲಿ ನಡೆದಿಲ್ಲ. ನಾವು ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಗೆ ವೈಯಕ್ತಿಕವಾಗಿ ಸಂಭೋಧಿಸಿ ಹೇಳುವೆವು. ನಿಮಗೆ ಎಂದಾದರೂ ವಿಷಪೂರಿತ ಕಪ್ಪು ಹಾವನ್ನು ಪಡೆದು ಸಾಕಿ ಸಲಹಿ ತರಬೇತಿ ನೀಡಿ ಆಥಮನನ್ನು ಕಚ್ಚಲು ಅವರ ಅರಮನೆಯಲ್ಲಿ ಬಿಟ್ಟು ಬರಲು ಹೇಳಲಾಗಿತ್ತೆ. ಅಲ್ಲಿಯೂ ಸಾಧ್ಯವಾಗಲಿಲ್ಲ ಎಂದಾದರೆ ಲೂಧಿಯಾನಕ್ಕೆ ಹೋಗಿ ಅಲ್ಲೂ ಸಾಧ್ಯವಾಗಲಿಲ್ಲ ಎಂದರೆ ಫಿರೋಜಪುರಕ್ಕೆ ಹೋಗಿ ಕಾರ್ಯಪೂರ್ತಿಮಾಡಿ ಎಂದು ಹೇಳಲಾಗಿತ್ತೆ.

ನಾವು ಮತ್ತೊಮ್ಮೆ ಹೇಳುತ್ತೇವೆ. ಇಂತಹ ವಿಶ್ವಾಸಘಾತಕ ಸಲಹೆ ಯೋಚನೆ ಎಂದೂ ಮಾಡಲಿಲ್ಲ. ಗುರುಗಳಾದವರು ಸತ್ಯ ಪ್ರಮಾಣಿಕತೆ ನೆಚ್ಚಿಕೊಂಡರೆ ಮಾತ್ರ ಶಿಷ್ಯಂದಿರಿಗೆ ವಿಶ್ವಾಸ ಬರಲು ಸಾಧ್ಯ. ಅಂತೂ ಈ ರೀತಿಯ ಯಾವ ಯೋಜನೆ ಮೋಸಗಾರಿಕೆ ಸಾಬೀತಾಗಲಿಲ್ಲ. ಅದಾಗ್ಯೂ ನಮ್ಮ ಶಿಷ್ಯರ ಬಗ್ಗೆ ಕೇಳಿದರೆ, ಪ್ರತಿಯೊಬ್ಬ ವ್ಯಕ್ತಿ ತಮ್ಮ ಮನದಲ್ಲಿ ಯೋಚಿಸಿ ನಿರ್ಣಯಿಸಿ ಹೇಳಲಿ. ಯಾರಾದರೂ ನಾನು ಹೇಳಿದ್ದರಿಂದ ಅಥವ ಸ್ವಯಂ ಆಥಮ್‌ನ ಮೇಲೆ ಹಲ್ಲೆ ಮಾಡಲು ಅಮೃತ್ಸರ ಲೂಧಿಯಾನ ಮತ್ತು ಗೋರೋಜಪುರಕ್ಕೆ ಹೋಗಿದ್ದರೆ? ಎಲ್ಲರ ಉತ್ತರವು ನಾನು ಹೋಗಿರಲಿಲ್ಲ ಎಂದು ಸ್ಪಷ್ಟವಾಗಿದೆ. ಅಷ್ಟೇ ಅಲ್ಲ ಅಂತಹ ನೀಚ ಶಿಕ್ಷಣ ನಮಗೆ ನೀಡಲಿಲ್ಲ ಎಂದೇ ಅವರ ಉತ್ತರವಾಗಿರುವುದು.

ಈ ರೀತಿ ಏನಾದರೂ ನಾನು ಹೇಳುತ್ತಿದ್ದರೆ ಅವಶ್ಯವಾಗಿ ಅವರು ನಾವು ಇಂತಹ ಮೋಸಗಾರನೊಬ್ಬನನ್ನು ನಂಬಿ ಹಾಳಾದೆವು ಎನ್ನುತ್ತಿದ್ದರು. ಅಲ್ಲಾಹನ ದಿವ್ಯವಾಣಿ ಆಧಾರಿತ ಭವಿಷ್ಯವಾಣಿ ಎಂದು ಹೇಳಿ. ಇದೀಗ ಹೇಳುವುದು ತನ್ನ ಭವಿಷ್ಯವಾಣಿ ಪೂರ್ತಿಯಾಗಿ ಆಥಮ್‌ನನ್ನು ಹತ್ಯೆ ಮಾಡಿದಿರಿ ಎಂದು. (ಅದೇ ಪುಟ 282).

ಭಯಕ್ಕೆ ಕಾರಣ ಭವಿಷ್ಯವಾಣಿಯ ಘನತೆ ಮತ್ತು ಗೌರವ ಹಲ್ಲೆಯ ನೆಪ ಒಂದು ಸುಳ್ಳು ನೆಪ ಮಾತ್ರ ಯಾವ ದೃಢತೆ, ಶಕ್ತಿಯಿಂದ ಆ ಭವಿಷ್ಯವಾಣಿ ಮಾಡಲಾಗಿತ್ತು. ಕ್ರೈಸ್ತರ ವಿಶ್ವಾಸ ಓರ್ವ ಸೃಷ್ಟಿಯನ್ನು ದೇವನನ್ನಾಗಿ ಮಾಡುವುದು, ಅದರ ಮುಂದೆ ನಿಲ್ಲಲು ಸಾಧ್ಯವಿರಲಿಲ್ಲ. ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. ಆ ಭವಿಷ್ಯವಾಣಿಯ ಘನತೆ ಗೌರವದಿಂದಲೇ ಅವನು ಹೆದರಿಕೊಂಡಿದ್ದಾನೆಯೇ ಹೊರತು ನಮ್ಮ ಜಮಾಅತಿನಿಂದ ಯಾವನು ಸಹ ಶಸ್ತ್ರ ಹಿಡಿದು ಅವರ ಅರಮನೆಗೆ ಹೋಗಲಿಲ್ಲ. ಅಂದ ಹಾಗೆ ಅವನ ಹೆದರಿಕೆ ಸ್ವಯಂ ಅವನ ಒಪ್ಪಿಗೆ, ಹೇಳಿಕೆ ಮತ್ತು ಕರ್ಮಗಳಿಂದ ಸಾಬೀತಾಗಿದೆ. ಇಂತಹ ಪ್ರಭಾವಪೂರ್ಣ ಭವಿಷ್ಯವಾಣಿಯಿಂದ ಬಹುದೇವಾರಾಧಕರೊಬ್ಬನು ಹೆದರುವುದು ಸಾಮಾನ್ಯ ಮಾತಾಗಿದೆ. ನಮ್ಮ ಜಮಾಅತಿನವರಿಂದ ಈ ಮೂರು ಹಲ್ಲೆಗಳು ನಡೆದಿವೆ ಎಂಬುದು ಅಪ್ಪಟ ಸುಳ್ಳು ಮತ್ತು ಆಧಾರರಹಿತವಾಗಿದೆ. ಅದನ್ನು ಆಥಮನಿಗೆ ಸಾಬೀತುಪಡಿಸಲು ಸಾಧ್ಯವಾಗಲಿಲ್ಲ. (ಅದೇ ಪುಟ 288).

ಭವಿಷ್ಯವಾಣಿಯಲ್ಲಿ ಅಬ್ದುಲ್ ಆಥಮ್ ಎಂದು ಪದವಿಲ್ಲ ಬದಲು "ಪಕ್ಷ" (ಫರೀಖ್) ಎಂಬ ಪದವಿದೆ. "ಪಕ್ಷ" ನೆಲೆಯಲ್ಲಿ ಈ ಭವಿಷ್ಯವಾಣಿ ಹೇಗೆ ಪೂರ್ಣಗೊಂಡಿತು ಎಂಬ ಕುರಿತು ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ವಿವರ ನೀಡುವೆವು. ಅಲ್ಲದೇ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರ ವೈಭವಯುತ ಬಹುಮಾನದ ಪಂಥಹ್ವಾನ ಕುರಿತು ವಿವರ ನೀಡುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ರೀತಿಯಲ್ಲಿ ಈ ಶುಭ ಪ್ರಯಾಣ ಬೆಳೆಸುವಂತಾಗಲಿ ಮತ್ತು ಯಶಸ್ವಿಯಾಗಿ ಮರಳಿ ಬರುವಂತಾಗಲಿ.

ಹಝ್ರತ್ ಮಸೀಹ್ ಶಿಲುಬೆ ಘಟನೆಯ ನಂತರ ನಸೀಬೈನ್ ಬರುವಿಕೆಯಿಂದ ನನಗೆ ದೃಢ ವಿಶ್ವಾಸವಿದೆ. ಈ ಪ್ರಯಾಣ ಆಯೋಜಿಸದಿದ್ದರೂ, ಅಲ್ಲಾಹನ ಅನುಗ್ರಹದಿಂದ ಬೇಕಾದಷ್ಟು ಸಾಕ್ಷ್ಯಗಳು ಅದನ್ನು ಸಾಬೀತುಪಡಿಸಲು ನಮ್ಮ ಬಳಿ ಇವೆ. ಅದನ್ನು ನಮ್ಮ ವಿರೋಧಿಗಳ ಲೇಖನಿ ಆಗಲಿ, ಮೌಖಿಕವಾಗಲಿ ಅಲ್ಲಗಳೆಯಲಾರರು. ಆದರೂ ವಿಶ್ವಾಸ ಉಳ್ಳವರು ಸದಾ ಹೆಚ್ಚಿನ ಪ್ರಗತಿ ಬಯಸುತ್ತಾರೆ. ಅವರು ಆದಷ್ಟು ಹೆಚ್ಚು ಸಾಕ್ಷ್ಯಗಳ ದಾಹವಿರಿಸಿಕೊಳ್ಳುತ್ತಾರೆ, ಎಂದು ಅದರಿಂದ ದೂರವಾಗುವುದಿಲ್ಲ. ಆದುದರಿಂದ ನಮ್ಮ ಬಯಕೆಯು ಅದೇ ಆಗಿದೆ. ಎಷ್ಟು ಸಾಕ್ಷ್ಯಗಳು ದೊರೆಯುತ್ತವೆಯೋ ಅಷ್ಟು ಒಳ್ಳೆಯದೇ. ಅದೇ ಉದ್ದೇಶದಿಂದ ಈ ಸಭೆ ಆಯೋಜಿಸುವ ಅವಶ್ಯಕತೆ ಬಿತ್ತು. ನಾವು ನಮ್ಮ ಮಿತ್ರರನ್ನು ನಸೀಬೈನ್‌ಗೆ ಕಳುಹಿಸುತ್ತೇವೆ. ಆ ಬಗ್ಗೆ ನಮಗೆ ಸುಳಿವು ದೊರೆತಿದೆ. ಅಲ್ಲಿಯ ದೊರೆ ಹಝ್ರತ್ ಮಸೀಹರಿಗೆ (ಅದಾಗ್ಯೂ ಅವರು ತನ್ನ ಕೃತಘ್ನ ಸಮುದಾಯದಿಂದ ಪೀಡನೆಗೆ ಒಳಗಾಗಿದ್ದರು) ಪತ್ರ ಬರೆದಿದ್ದನು.

ತಾವು ನನ್ನ ಬಳಿಗೆ ಬನ್ನಿರಿ, ಶಿಲುಬೆ ಘಟನೆಯ ನಂತರ ಅಲ್ಲಿಂದ ರಕ್ಷಣೆ ಪಡೆದು ಈ ಸ್ಥಳಕ್ಕೆ ತಲುಪಿ ಆ ದುರಾದೃಷ್ಟ ಸಮುದಾಯದಿಂದ ಮುಕ್ತಿ ಪಡಿಯಿರಿ. ಅಲ್ಲಿಯ ದೊರೆ ಹೀಗೆ ಸಹ ಬರೆದಿದ್ದರು. ನೀವು ನಮ್ಮ ಬಳಿ ಬಂದರೆ ನಾವು ನಿಮ್ಮ ಸೇವೆ ಮಾಡುವ ಭಾಗ್ಯ ಪಡೆದಂತಾಗುವುದು. ನಾನು ಅನಾರೋಗ್ಯವಾಗಿದ್ದೇನೆ. ನನಗಾಗಿ ಪ್ರಾರ್ಥಿಸಿರಿ. ಇದೆಲ್ಲ ನಮಗೆ ಒಂದು ಇಂಗ್ಲೀಷ್ ಗ್ರಂಥದಿಂದ ತಿಳಿದುಬಂದಿದೆ. ಆದರೆ ನಾನು ನೋಡುತ್ತಿದ್ದೇನೆ.

“ರೋಝುತುಸ್ಸಫಾ” ಒಂದು ಐತಿಹಾಸಿಕ ಇಸ್ಲಾಮಿ ಗ್ರಂಥವಾಗಿದೆ. ಅದೇ ರೀತಿಯ ವಿಷಯಾನುಸಾರ ಅದರಲ್ಲಿಯೂ ಒಳಗೊಂಡಿದೆ. ಆದುದರಿಂದ ನನಗೆ ದೃಢ ವಿಶ್ವಾಸವಿದೆ. ಮಸೀಹ್(ಅ) ಅವಶ್ಯವಾಗಿ ಅದೇ ಮಾರ್ಗದಿಂದ ಭಾರತಕ್ಕೆ ಬಂದಿದ್ದರು. ಅಲ್ಲಾಹನೇ ಎಲ್ಲವನ್ನು ಬಲ್ಲವನಾಗಿದ್ದಾನೆ. ಆದರೆ ನಮ್ಮ ಹೃದಯ ಸಾಕ್ಷ್ಯ ವಹಿಸುತ್ತದೆ. ಈ ಪ್ರವಾಸದಿಂದ ಇನ್‌ಶಾಅಲ್ಲಾಹ್ ನಿಜಸ್ಥಿತಿ ಬಯಲಾಗುವುದು ಮತ್ತು ಅಸಲಿಯತ್ತು ನಿಚ್ಚಳಗೊಳ್ಳುವುದು. ಈ ಪ್ರವಾಸದ ಸಾಧ್ಯತೆ ಏನೆಂದರೆ ಅವರಿಗೆ ಇಂತಹದೊಂದು ಬರಹಗಳು ದೊರೆಯಬಹುದು ಅಥವಾ ಶಿಲೆಗಳು ದೊರೆಯುವುವು. ಅದರಿಂದ ಮಸೀಹ(ಅ) ಇಲ್ಲಿಂದ ಪ್ರಯಾಣಿಸಿದ ಕುರುಹುಗಳ ಮೇಲೆ ಪ್ರಕಾಶ ಬೀರಬಹುದು ಅಥವಾ ಹವಾರಿಗಳಲ್ಲಿ ಒಬ್ಬರ ಗೋರಿಯ ಸುಳಿವು ದೊರೆಯಬಹುದು ಅಥವಾ ನಮ್ಮ ಉದ್ದೇಶಕ್ಕೆ ಪುಷ್ಟಿ ನೀಡುವಂತಹ ಕೆಲ ಸಾಕ್ಷ್ಯಗಳು ದೊರೆಯಬಹುದು. ಆದುದರಿಂದ ನಾನು ತನ್ನ ಜಮಾಅತಿನಿಂದ ಮೂವರನ್ನು ಈ ಪ್ರವಾಸಕ್ಕಾಗಿ ಸಿದ್ಧಪಡಿಸಿದ್ದೇನೆ. ಅವರಿಗಾಗಿ ಒಂದು ಅರಬಿ ಗ್ರಂಥ ಸಹ ಸಿದ್ಧಪಡಿಸಬಯಸುತ್ತೇನೆ. ಅದು ಅವರ ಪ್ರಚಾರ ಕಾರ್ಯಕ್ಕಾಗಿ ಸಹಾಯಕವಾಗಬಹುದು. ಅವರು ಎಲ್ಲೆಲ್ಲಿ ಹೋಗುತ್ತಾರೋ ಅಲ್ಲಲ್ಲಿ ಅದನ್ನು ಹಂಚಬಹುದು. ಹೀಗೆ ಈ ಪ್ರವಾಸದಿಂದ ಇದೊಂದು ಪ್ರಯೋಜನವಾಗಬಹುದು. ನಮ್ಮ ಸಂಘಟನೆಯ ಪ್ರಚಾರವು ಆಗಬಹುದು.

**(ಮಲ್‌ಫೂಝಾತ್ ಸಂಪುಟ–1, ಪುಟ–305–306, ಮುದ್ರಣ 2008)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮಾತನಾಡುತ್ತಿದ್ದೆನೋ ಅದರ ಮೇಲೆ ಪೂರ್ಣ ವಿಶ್ವಾಸ ಹೊಂದಿರಬೇಕು. ಸಂದರ್ಭೋಚಿತವಾಗಿ, ಸಮಯೋಚಿತವಾಗಿ ಸತ್ಯವನ್ನು ಸ್ಪಷ್ಟಪಡಿಸುವುದು ಇವೆಲ್ಲ ಜಾಣ್ಮೆಗೆ ಸೇರಿದ್ದವುವಾಗಿವೆ.

ಹುಝೂರೆ ಅನ್ವರ್(ಅಬಿಅ) ನುಡಿದರು ಅಂದ ಹಾಗೆ ಅಲ್ಲಾಹನೆಡೆ ಆಹ್ವಾನಿಸುವವರು ವಿವಿಧ ಜನರ ಸ್ವಭಾವಕ್ಕನುಗುಣವಾಗಿ ವಿವಿಧ ರೀತಿಯಲ್ಲಿ ಪ್ರಚಾರ ಮಾಡಬೇಕಾಗುತ್ತದೆ. ಪ್ರತಿಯೊಬ್ಬರಿಗೆ ಒಂದೇ ರೀತಿಯಲ್ಲಿ ಸಂದೇಶ ಹೇಳಲಾಗದು. ಒಬ್ಬನು ವಿದ್ಯಾವಂತನಾಗಿರುತ್ತಾನೆ ಒಬ್ಬನು ತನ್ನ ಧರ್ಮದ ಮೇಲೆ ಗಟ್ಟಿ ನಿಲುವು ಹೊಂದಿರುತ್ತಾನೆ. ಒಬ್ಬನು ವಿಜ್ಞಾನಾಧಾರಿತ ವಿಷಯ ಬಯಸುತ್ತಾನೆ. ಒಬ್ಬನು ಭಾವುಕತೆಯಿಂದ ಪ್ರೇರಿತಗೊಳ್ಳುತ್ತಾನೆ. ಒಬ್ಬನು ನಡತೆಯಿಂದ ಪ್ರಭಾವಿತನಾಗುತ್ತಾನೆ. ಹೀಗೆ ವೈವಿಧ್ಯಮಯ ವಿಧಾನಗಳಿವೆ. ಆದುದರಿಂದ ಯಾರು ವಿದ್ಯೆ ಮತ್ತು ವಿಜ್ಞಾನದಿಂದ ಪ್ರಭಾವಿತರಾಗುವರೋ ಅವರಿಗೆ ನಾವು ವಿದ್ಯೆಯ ಬಲದಿಂದಲೇ ಮನಿಸುವ ಪ್ರಯತ್ನ ಮಾಡಬೇಕಾಗುತ್ತದೆ. ಭಾವುಕತೆ ಅಲ್ಲಿ ಸಮಂಜಸವಾಗುವುದಿಲ್ಲ. ಅದಕ್ಕಾಗಿ ನಾವು ನಮ್ಮ ಜ್ಞಾನದಲ್ಲಿ ಪ್ರಗತಿ ಹೊಂದಿದವರಾಗಬೇಕು. ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಪ್ರಚಾರ ಮಾಡಬಯಸುವುದಾದರೆ, ನ್ಯಾಯವಲ್ಲದಂತಹ ಮಾತುಗಳನ್ನು ಆಡಬಾರದು ಹಾಗು ಅವರು ನಮ್ಮ ಕಡೆ ಬೊಟ್ಟು ಮಾಡುವಂತಹ ಆರೋಪಗಳಿರಬಾರದು. ಅನ್ಯಧರ್ಮೀಯರು ಇಸ್ಲಾಮಿನ ಮೇಲೆ ಇಂತಹ ಆರೋಪಗಳನ್ನು ಮಾಡುತ್ತಿರುತ್ತಾರೆ. ಅದು ಅವರಿಗೆಯೇ ತಿರುಗುಬಾಣವಾಗುತ್ತವೆ. ಅವರಷ್ಟೇ ಅಲ್ಲ. ಮುಸ್ಲಿಮರು ಸಹ ಇಂದು ಅಹ್ಮದಿಯಾ ಜಮಾಅತಿನ ಮೇಲೆ ಇಂತಹುದೇ ಆರೋಪಗಳು ಮಾಡುತ್ತಾರೆ. ಹಝ್‌ರತ್ ಮಸೀಹ್ ಮೌಊದ್(ಅ) ರವರ ಮೇಲೆ ಇಂತಹುದೇ ಆರೋಪಗಳನ್ನು ಮಾಡುತ್ತಾರೆ. ಅದು ನ್ಯಾಯದೃಷ್ಟಿಯಿಂದ ನೋಡಿದರೆ ಇತರ ಪ್ರವಾದಿಗಳ ಮೇಲು ಅದು ಸಾದರಪಡುತ್ತವೆ. ಆದುದರಿಂದ ಮಾತನಾಡುವಾಗ ನ್ಯಾಯವಲ್ಲದಂತಹ ಮಾತುಗಳನ್ನಾಡುವ ಪರಿ ಇರಕೂಡದು.

ಹುಝೂರೆ ಅನ್ವರ್(ಅಬಿಅ) ಹೇಳಿದರು.

ಪ್ರಚಾರಕಾರ್ಯ ಕೈಗೊಳ್ಳುವವರು ಇದು ಸಹ ನೆನಪಿಡಬೇಕು. ಧರ್ಮದ ಸೌಂದರ್ಯ, ಸಹಿಷ್ಣುತೆ, ತಾಳ್ಮೆಯಿಂದ ಪ್ರಸ್ತುತಪಡಿಸಬೇಕು. ನಾವು ಮುಸ್ಲಿಮರಲ್ಲೂ ಪ್ರಚಾರ ಮಾಡಬೇಕಾಗಿದೆ. ಮುಸ್ಲಿಮೇತರರಲ್ಲೂ ಸಹ ಪ್ರಚಾರ ಮಾಡಬೇಕಾಗಿದೆ. ಇದೀಗ ಐರೋಪ್ಯ ದೇಶಗಳಲ್ಲಿ ವಿವಿಧ ದೇಶಗಳಿಂದ ಲಕ್ಷೋಪ ಲಕ್ಷ ಸಂಖ್ಯೆಯಲ್ಲಿ ಮುಸ್ಲಿಮರು ಬಂದು ಸೇರಿದ್ದಾರೆ. ಅವರೆಲ್ಲರೂ ವಿವಿಧ ಪಂಥಗಳವರಾಗಿದ್ದಾರೆ. ಅವರಲ್ಲಿ ಪರಸ್ಪರ ವೈರುಧ್ಯ ಭಾವನೆಯುಳ್ಳವರು ಇದ್ದಾರೆ. ಕಾಫಿರ್ ಎಂದು ವಾದಿಸುವವರು ಇದ್ದಾರೆ. ನಾನು ಈ ಸಮಯ ಕಾಫಿರ್ ಎನ್ನಲು ಕಾರಣಗಳೇನು? ಎಂಬ ವಿಶ್ಲೇಷಣೆಗೆ ಹೋಗುವುದಿಲ್ಲ. ಅಂತೂ ಈ ಜನರು ಕೇವಲ ಅಹ್ಮದಿಯರಿಗಷ್ಟೇ ಕಾಫಿರ್ ಎನ್ನುವುದಿಲ್ಲ. ಅದು ಪರಸ್ಪರವು ಕಾಡುತ್ತಿರುತ್ತವೆ. ನಿನ್ನೆ ಅಷ್ಟೇ ಇಲ್ಲಿ ಅರಬರ ಜೊತೆಯಲ್ಲಿ ಭೇಟಿ ಕಾರ್ಯಕ್ರಮವಿತ್ತು. ಐನೂರರಷ್ಟು ಜನರಿದ್ದರು. ಅವರಲ್ಲಿ ಕೆಲವರು ಅಹ್ಮದಿಯೇತರರಾಗಿದ್ದರು. ನನ್ನ ಅಭಿಪ್ರಾಯದಲ್ಲಿ ಅಹ್ಮದಿಯೇತರರು ಹೆಚ್ಚಾಗಿದ್ದರು. ಅವರಲ್ಲಿ ಒಬ್ಬರು ಹೇಳಿದರು. ಇಂತಹ ಪಂಥದವರು ಸಹಾಬರಿಗೆ ಕಾಫಿರ್ ಎನ್ನುತ್ತಾರೆ. ನೀವೇನೆನ್ನುತ್ತೀರಿ. ನಾನು ಅವರಿಗೆ ಹೇಳಿದೆ. ಹಝ್‌ರತ್ ರಸೂಲುಲ್ಲಾಹ್(ಸ) ರವರು ಹೇಳಿದ್ದಿಷ್ಟು. ಮುಸ್ಲಿಮನೊಬ್ಬನಿಗೆ ಕಾಫಿರ್ ಎಂದು ಹೇಳುವವರ ಮೇಲೆ, ಅವರ ಮೇಲೆಯೇ ಕುಫ್ರ್ ಮರಳುತ್ತದೆ. ಆದರೂ ಅವರು ಮತ್ತೆ ಮತ್ತೆ ಆಗ್ರಹಿಸುತ್ತಿದ್ದರು. ನೀವು ಏನೆನ್ನುತ್ತೀರಿ? ನಾನು ಅವರಿಗೆ ಹೇಳಿದೆ ಹಝ್‌ರತ್ ರಸೂಲುಲ್ಲಾಹ್(ಸ) ರವರ ಮಾತಿಗೆ ವಿರುದ್ಧವಾಗಿ ನನಗೇನು ಹೇಳಲು ಸಾಧ್ಯವಿದೆ? ನನಗೆ ಹೇಳುವ ಅಗತ್ಯವಾದರೂ ಏನು. ಅಂದ ಹಾಗೆ ತಬ್ಲೀಗ್ ಮಾಡಲು ಜಾಣ್ಮೆ ಅವಶ್ಯವಾಗಿದೆ. ಸಹಿಷ್ಣುತೆ ಮತ್ತು ಅನುಕಂಪ ತೋರಿಸಬೇಕು. ಅನುಕಂಪವಿದ್ದರೆ ಮಾತ್ರ ಸಹಿಷ್ಣುತೆ ಬರಲು ಸಾಧ್ಯ. ನಿಜವಾದ ಸಹಿಷ್ಣುತೆ ಎಂದರೆ ಒಂದು ದೊಡ್ಡ ಉದ್ದೇಶಕ್ಕಾಗಿ ಸಣ್ಣ ಸಣ್ಣ ಉಪದ್ರವಗಳನ್ನು ಸಹಿಸಿಕೊಳ್ಳಲೇಬೇಕಾಗುತ್ತದೆ. ಅತ್ಯಂತ ಘನವಾದ ಉದ್ದೇಶವೆಂದರೆ ಅಲ್ಲಾಹನ ಸಂದೇಶ ತಲುಪಿಸುವುದಾಗಿದೆ. ಅದರ ಮುಂದೆ ಎಲ್ಲವು ಗೌಣ ಆಗುವುದರಿಂದ ತಾಳ್ಮೆ ಪ್ರದರ್ಶಿಸಬೇಕಾಗಿದೆ.

ಹುಝೂರೆ ಅನ್ವರ್(ಅಬಿಅ) ನುಡಿದರು. ನಮಗಂತೂ ಆ ನಾಮಧಾರಿ ಉಲಮಾಗಳ ತಪ್ಪು ದೃಷ್ಟಿಕೋನಗಳನ್ನು ನಂಬಿ ಸಹಾಬ ಶ್ರೇಷ್ಠರ ಮೇಲೆ ಆರೋಪ ಮಾಡುವವರ ಮತ್ತು ಅವರ ಬಗ್ಗೆ ತಪ್ಪು ನಿಲುವು ಹೊಂದಿದವರ ಮೇಲು ಸಹ ಅನುಕಂಪವಿದೆ. ಏಕೆಂದರೆ ಅವರಿಗೆ ಸರಿದಾರಿ ತೋರಿಸಬೇಕಾಗಿದೆ. ಅವರಿಗೆ ಅವರ ತಪ್ಪುಗಳಿಂದ ತಡೆಯಬೇಕಾಗಿದೆ. ಬುದ್ಧಿ, ಸ್ನೇಹ ಮತ್ತು ಪ್ರೀತಿಯಿಂದ ತಾಳ್ಮೆ ಸಹಿಷ್ಣುತೆಯಿಂದ ಈ ಕೆಲಸ ಮಾಡಬೇಕಾಗಿದೆ. ಹಝ್‌ರತ್ ರಸೂಲುಲ್ಲಾಹ್(ಸ) **ಒಬ್ಬ ಕಲಿಮ ಉಚ್ಚರಿಸುವವನಿಗೆ ಕಾಫಿರ್ ಎಂದು ಹೇಳಿದರೆ ಆ ಕುಫ್ರ್ ಅವನ ಮೇಲೆಯೇ ಮರಳುತ್ತದೆ** ಎಂದು ಹೇಳಿರುವರು. ಅವರ ರುಂಡವನ್ನು ಕತ್ತರಿಸಿರಿ ಎಂದು ಹೇಳಲಿಲ್ಲ. ನಾವು ಕಾಫಿರ್ ಮತ್ತು ಅನ್ಯಧರ್ಮೀಯರಿಗೂ ಪ್ರಚಾರ ಮಾಡಬೇಕಾಗಿದೆ. ಅವರಿಗೆ ಇಸ್ಲಾಮಿನ ಗುಣಗಳನ್ನು ಪರಿಚಯಿಸಬೇಕಾಗಿದೆ.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಅಂದ ಹಾಗೆ ನಮಗೆ ನಮ್ಮ ಕಡೆಯಿಂದ ಕಾಫಿರ್ ಫತ್ವಾ ಹೇಳುವ ಅಗತ್ಯವಿಲ್ಲ. ಕಾಫಿರ್ ಎನ್ನಲು ನಮಗೆ ಸಂತೋಷವು ಇಲ್ಲ. ಹೀಗೆ ಮಾಡುವವರಿಗೆ, ಈ ರೀತಿ ಯೋಚನೆಯುಳ್ಳವರಿಗೆ, ನಾವು ಇಸ್ಲಾಮಿಗೆ ಯಾವ ರೀತಿ ಸೇವೆ ಮಾಡಿದಂತಾಯಿತು ಎಂದು ಯೋಚಿಸ ಬೇಕಾಗಿದೆ. ಇಸ್ಲಾಮಿನ ಸೇವೆಯು ಕಾಫಿರ್ ಆಗಲಿ ಅಥವಾ ಬೇರೆ ಯಾರೆ ಆಗಲಿ ಅವರ ತಪ್ಪು ದೃಷ್ಟಿಕೋನಗಳನ್ನು ಸಾಕ್ಷ್ಯಾಧಾರವಾಗಿ ಎತ್ತಿ ತೋರಿಸಿ ನಿಜವಾದ ಮುಸ್ಲಿಮನನ್ನಾಗಿ ಮಾಡುವುದಾಗಿದೆ. ಹಝ್‌ರತ್ ರಸೂಲುಲ್ಲಾಹ್(ಸ) ರವರ ನುಡಿಯ ಪ್ರಕಾರ ಯಾರ ಕೈಗಳಿಂದ ಅಥವಾ ನಾಲಿಗೆಯಿಂದ ಇತರ ಮುಸಲ್ಮಾನರು ಮಾತ್ರವಲ್ಲ. ಪ್ರತಿಯೊಬ್ಬ ಮನುಷ್ಯನು ಸುರಕ್ಷಿತನೋ, ಅವನೇ ಮುಸ್ಲಿಮನಾಗಿರುವವನು.

ಹುಝೂರೆ ಅನ್ವರ್(ಅಬಿಅ) ನುಡಿದರು.

ಅಂದ ಹಾಗೆ ಇತರರು ನಮ್ಮ ಕೆಲಸದಿಂದ, ನಮ್ಮ ನಾಲಿಗೆಗಳಿಂದ, ಮತ್ತು ನಮ್ಮ ಕೈಗಳಿಂದ ನಷ್ಟವನ್ನುಂಟು ಮಾಡುವುದರಿಂದ ಎಂದೆಂದೂ ಸುರಕ್ಷಿತರಾಗಿರಬೇಕು. ಇನ್ನೊಂದು ಜಾಣ್ಮೆಯ ಮಾತೆಂದರೆ ಪ್ರತಿಯೊಂದು ಮಾತು ಸಂಧರ್ಭೋಚಿತವಾಗಿರಬೇಕು. ಶತ್ರುಗಳಿಗೆ ಉತ್ತೇಜಿಸುವಂತಹ ಮಾತುಗಳಾಗಿರಬಾರದು. ಅವರು ಕೋಪೋದ್ರೇಕಗೊಳ್ಳುವಂತಹ ಮಾತುಗಳಿರಬಾರದು. ಅದರ ಬದಲು ಶಾಂತಿ ಮಾರ್ಗದಿಂದ ಪ್ರಚಾರ ಕಾರ್ಯಕೈಗೊಳ್ಳಬೇಕು. ಸ್ವಯಂ ಗೊಂದಲ ಸೃಷ್ಟಿಸಿ ಅವರ ಆರೋಪಗಳಿಗೆ ಗುರಿಯಾಗುವಂತಾಗಬಾರದು.

ಹುಝೂರೆ ಅನ್ವರ್(ಅಬಿಅ) ನುಡಿದರು.

ಪ್ರಚಾರ ಕಾರ್ಯವು ಸಾಕ್ಷ್ಯಾಧಾರಿತ ಮತ್ತು ಸತ್ಯಾಧಾರಿತವಾಗಿರಬೇಕು. ಕೆಲವರು ಭಾವಿಸುವುದೇನೆಂದರೆ ನಾವು ಸತ್ಯಧರ್ಮದೆಡೆಗೆ ಕರೆಯುತ್ತಿದ್ದೇವೆ. ಸಾಕ್ಷ್ಯಾಧಾರಗಳು ಏಕೆ ಬೇಕು. ಇದು ತಪ್ಪು. ಮಾರ್ಗದರ್ಶನ ನೀಡುವುದು ಅಲ್ಲಾಹನ ಕಾರ್ಯವಾಗಿದೆ ಎಂದಿರುವಾಗ ಅಲ್ಲಾಹನು ಬಯಸಿದಂತಹ ಸಾಕ್ಷ್ಯಾಧಾರಗಳನ್ನು ವಿವರಿಸಬೇಕು. ಇತರರಿಗೆ ಮಾರ್ಗದರ್ಶನ ಮಾಡುವವರು ಸ್ವಯಂ ಸುಳ್ಳಿಗೆ ಗುರಿಯಾಗುವಂತಾಗಿರಬಾರದು. ಕೆಲವರು ಘಟನೆಗಳನ್ನು ಅತಿಶಯೋಕ್ತಿ ರೀತಿಯಲ್ಲಿ ವರ್ಣಿಸುತ್ತಾರೆ. ಹಝ್‌ರತ್ ಮುಸ್ಲಿಹ್ ಮೌಊದ್(ರ) ಒಂದು ಘಟನೆಯನ್ನು ವಿವರಿಸುತ್ತ ಹೇಳುತ್ತಾರೆ. ಮಿತ್ರರೊಬ್ಬರು ಹಝ್‌ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಕುರಿತು ಹೇಳುವಾಗ ಅವರ ದೃಷ್ಟಾಂತಗಳ ಕುರಿತು ಅತಿಶಯೋಕ್ತಿಯಿಂದ ವರ್ಣಿಸುತ್ತಿದ್ದರು. ಒಂದು ದಿನ ಅವರು ಮುಸ್ಲಿಹ್ ಮೌಊದ್(ರ) ರವರ ಜೊತೆಗಿದ್ದರು. ಆಗ ಒಬ್ಬ ಅರೇಬಿಯನಿಗೆ ಹಝ್‌ರತ್ ಮಸೀಹ್ ಮೌಊದ್(ರ) ರೊಂದಿಗೆ ಅಲ್ಲಾಹನ ಪುಷ್ಟಿ ಮತ್ತು ದೃಷ್ಟಾಂತಗಳ ಕುರಿತು ವಿವರಿಸುತ್ತ ಲೇಖರಾಮರ ಹತ್ಯೆಯ ಘಟನೆ ಹೀಗೆ ಹೇಳಿದರು. ಹಝ್‌ರತ್ ಮಸೀಹ್ ಮೌಊದ್(ಅ) ಭವಿಷ್ಯವಾಣಿ ಮಾಡಿದರು. ಇಂತಹ ದಿನ ಇಂತಹ ಸಮಯ ಲೇಖರಾಮನು ಹತ್ಯೆಯಾಗುವನು. ಯಾರು ಸಹ ಅವನನ್ನು ಉಳಿಸಲು ಸಾಧ್ಯವಿಲ್ಲ. ಮತ್ತೆ ಅದೇ ದಿನ ಅದೇ ಸಮಯಕ್ಕೆ ಲೇಖರಾಮನನ್ನು ವಿಶೇಷ ರಕ್ಷಣೆಯಲ್ಲಿ

ಇಡಲಾಯಿತು. ಅವನ ಮನೆ ಸುತ್ತಲೂ ಪೋಲೀಸರ ದಂಡು ರಕ್ಷಣೆಗೆ ಇಡಲಾಯಿತು. ಜನರು ಅವನ ಮನೆಯ ಹೊರಗೆ ಯಾರು ಒಳಗೆ ಹೋಗದಂತೆ ಕಾಯಲು ಒಟ್ಟುಗೂಡಿದರು. ಮನೆ ಒಳಗೂ ಅವನ ಸುರಕ್ಷತೆಗೆ ಏರ್ಪಾಡು ಮಾಡಲಾಯಿತು. ಆದರೆ ಇದೆಲ್ಲ ಆಗಿಯೂ ಒಬ್ಬ ದೇವದೂತನು ಮಾಳಿಗೆ ಒಡೆದು ಬಂದನು ಮತ್ತು ಅವನ ಹೊಟ್ಟೆಗೆ ಚೂರಿ ಹಾಕಿ ಹೋದನು. ಹೀಗೆ ಹತ್ಯೆಯಾಯಿತು. ಮತ್ತು ಯಾರಿಗೆ ಏನೂ ಕಾಣಲಿಲ್ಲ. ಆ ಅರೆಬಿಯನು ಈ ಮಾತನ್ನು ಕೇಳಿ ಅಲ್ಲಾಹು ಅಕ್ಬರ್, ಸುಬ್ಹಾನಲ್ಲಾಹ್ ಮತ್ತು ಮಾಶಾಲ್ಲಾಹ್ ಎಂದನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ನಾನು ಅವರಿಗೆ ಹೇಳಿದೆ. ನೀವು ಸುಳ್ಳು ಮತ್ತು ಅತಿಶಯೋಕ್ತಿಯ ಮಾತುಗಳನ್ನು ಆಡುತ್ತಿದ್ದೀರಿ. ಅವರಿಗೆ ಈ ವಾಸ್ತವನ್ನು ತಿಳಿಸಿರಿ. ಭವಿಷ್ಯವಾಣಿ ಪ್ರಕಾರ ದಿನವೇನು ನಿಗದಿಯಾಗಿತ್ತು. ಹಬ್ಬದ ಮರುದಿನವೆಂದು, ಆದರೆ ಆ ನಡುವೆ ಆರು ವರ್ಷಗಳ ಕಾಲ ಅವಧಿಯಿತ್ತು. ಬರುವ ಒಂದು ತಿಂಗಳ ಅಥವಾ ವರ್ಷ ಅಥವಾ ಇಂತಹ ದಿನ, ಅದು ಪೂರ್ತಿಯಾಯಿತು ಎಂದಿಲ್ಲ. ಯಾವ ರೀತಿ, ಇಂತಿಷ್ಟೇ ದಿನ ಎಂದು ನಿಗದಿ ಮಾಡಿ ನೀವು ಹೇಳುತಿದ್ದೀರಲ್ಲ ಅದು ತಪ್ಪು.

ನಾನು ಅವರಿಗೆ ಹೇಳುತ್ತೇನೆ ನೀವು ತಪ್ಪು ಹೇಳುತ್ತಿದ್ದೀರಿ. ವಾಸ್ತವ ಹೀಗಿದೆ ಎಂದು. ಆಗ ಆ ಮಿತ್ರನು ಕೈ ಜೋಡಿಸಿ ಹೇಳತೊಡಗಿದರು. ಬೇಡ ಈಗ ನನ್ನ ಮರ್ಯಾದೆ ಕಳೆಯಬೇಡಿರಿ. ಹಜ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಒಂದು ವೇಳೆ ಆ ಸಮಯ ನಾನು ಅವರಿಗೆ ತಿದ್ದಿ ಹೇಳುತ್ತಿರಲಿಲ್ಲವಾದರೆ ಆ ಅರಬನು ವಿವರಿಸುವಾಗ ಅವರು ಇನ್ನೆಷ್ಟು ಅತಿಶಯೋಕ್ತಿ ಮಾಡುತ್ತಿದ್ದರು ಮತ್ತು ಹೇಳಬಹುದಾಗಿತ್ತು. ಇಂತಹ ಪವಾಡ ನಡೆಯಿತು, ಅಲ್ಲಿಗೆ ದೇವದೂತರು ಆಗಮಿಸಿ ಅವರ ಹತ್ಯೆ ಮಾಡಿ ನಡೆದರೆಂದು. ಮುಂದೆ ಆ ಕಥೆ ಏನೇನೂ ಆಗಿ ಎಲ್ಲಿಗೋ ತಲುಪುತ್ತಿತ್ತು. ಏನು ಧರ್ಮದಲ್ಲಿ ಅದೇ ರೀತಿ ತಪ್ಪುಗಳು ಹರಡುತ್ತವೆ. ಕೆಲವು ನಾಮಧಾರಿ ಸಜ್ಜನರ ಬಗ್ಗೆ ಕಥೆಗಳನ್ನು ಕಟ್ಟಲಾಗುತ್ತದೆ.

ಹುಝೂರೆ ಅನ್ವರ್(ಅಬಿಅ) ನುಡಿದರು.

ಇದು ನಾನು ಸಾರಾಂಶ ರೂಪದಲ್ಲಿ ವಿವರಿಸಿದ್ದೇನೆ. ಒಬ್ಬರಿಗೆ ಮನವರಿಕೆ ಮಾಡಿಕೊಡಲು ಹೊರಟರೆ ನೈಜ ಘಟನೆಗಳನ್ನು ಗಮನದಲ್ಲಿರಿಸಬೇಕು. ಜಾಣ್ಮೆಯ ಇನ್ನೊಂದು ಅರ್ಥ ನುಬುವತ್ತು ಎಂದು ಸಹ ಆಗಿದೆ. ಅಂದರೆ ತಬ್ಲೀಗ್ ನುಬುವ್ವತ್ ರೀತಿಯಲ್ಲಿ ಕೈಗೊಳ್ಳಿರಿ. ಒಬ್ಬ ಮುಸಲ್ಮಾನನಿಗೆ ಮಾಧ್ಯಮ ಪವಿತ್ರ ಖುರ್‌ಆನ್ ಆಗಿದೆ. ಆದುದರಿಂದ ಪವಿತ್ರ ಖುರ್‌ಆನ್‌ನ ಸಾಕ್ಷ್ಯಗಳಿಂದ ಲೋಕದ ಜನರ ಹೃದಯಗಳನ್ನು ಜಯಿಸುವ ಪ್ರಯತ್ನ ಆಗಬೇಕಾಗಿದೆ. ತಮ್ಮ ಇಷ್ಟದ ಸಾಕ್ಷ್ಯಗಳಿಂದ ಅಲ್ಲ. ಪವಿತ್ರ ಖುರ್‌ಆನ್‌ನ ಸಾಕ್ಷ್ಯಗಳಿಂದ ಪ್ರಯತ್ನಿಸಿದರೆ ಆಗ ಅದಕ್ಕೆ ಮಹತ್ವ ಬರುವುದು. ಅನಗತ್ಯ ತಮ್ಮ ತರ್ಕಗಳಿಂದ ವಾದಿಸಲು ಹೊರಟರೆ ಅದು ವ್ಯರ್ಥವಾಗುವುದು.

ಹುಝೂರೆ ಅನ್ವರ್(ಅಬಿಅ) ನುಡಿದರು.

ಅಂದ ಹಾಗೆ ಇದೊಂದು ಆಯುಧವಾಗಿದೆ. ಅದನ್ನು ಉಪಯೋಗಿಸಿದಾಗ ಮಾತ್ರ ವಿಜಯ ನಮ್ಮದಾಗುವುದು. ನಾವು ಯಾವಾಗಲೂ ಪವಿತ್ರ ಖುರ್‌ಆನ್ ತಮ್ಮ ಜೊತೆಯಲ್ಲಿ ಇರಿಸಿಕೊಳ್ಳಬೇಕಾಗಿದೆ. ಆಗ ಮಾತ್ರ ನಾವು ಪ್ರತಿಯೊಬ್ಬರ ಬಾಯಿ ಮುಚ್ಚಿಸಲು ಸಾಧ್ಯವಾದೀತು. ಜಿಹಾದ್‌ಗೋಸ್ಕರವು ಅದೇ ಆಯುಧವಾಗಿದೆ. ಅಲ್ಲಾಹನು ಅದನ್ನೇ ಉಪಯೋಗಿಸಲು ಹೇಳಿರುವನು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಬಗ್ಗೆ ಬರೆಯುತ್ತಾರೆ. ಅಕಟಕಟಾ! ಇಂದು ಮುಸ್ಲಿಮರು ಈ ಮತನ್ನು ಅರಿಯುವವರಾಗಿದ್ದರೆ ಎಷ್ಟು ಒಳ್ಳೆಯದಿತ್ತು. ಇಂದು ನಾವು ಮುಸ್ಲಿಮರ ಅವಸ್ಥೆ ನೋಡುತ್ತಿದ್ದೇವೆ. ಅವರು ಎಷ್ಟೊಂದು ಉಗ್ರರಾಗಿ ಬಿಟ್ಟಿದ್ದಾರೆ. ಖಡ್ಗದಿಂದ ಲೋಕದ ವಿಜಯಪಡೆಯುವ ಮಾತುಗಳನ್ನು ಬಿಟ್ಟು, ಬಂದೂಕಿನ ಶಕ್ತಿಯ ಮೇಲೆ ಶರೀಅತ್ ಸ್ಥಾಪನೆಯ ಮಾಡುವದನ್ನು ಬಿಟ್ಟು, ಅದರ ಸುಂದರವಾದ ಶಿಕ್ಷಣದ ಮೂಲಕ ಜಯಿಸುವ ಪ್ರಯತ್ನ ಮಾಡಬೇಕು. ಆದರೆ ಈ ಬಗ್ಗೆ ಇನ್ನು ಅವರ ಬುದ್ಧಿಯ ಮೇಲೆ ಪರದೆ ಹಾಕಲ್ಪಟ್ಟಿವೆ ಈ ಪರದೆಗಳು ಕಾಲಘಟ್ಟದ ಇಮಾಮರ ಮೇಲೆ ವಿಶ್ವಾಸ ತಂದಾಗ ಮಾತ್ರ ಸರಿಯಲು ಸಾಧ್ಯ. ಆದುದರಿಂದ ಇಂದು ನಮ್ಮ ಕೆಲಸ ಈ ಆಯುಧದಿಂದ ಲೋಕವನ್ನು ಗಾಯಗೊಳಿಸಿ ಅವರ ಹೃದಯಗಳನ್ನು ಜಯಿಸಬೇಕಾಗಿದೆ.

**(ಮುಂದುವರಿಯುವುದು)**

**ವಿಶೇಶ ಸೂಚನೆ**

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.

ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಅ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

## ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳಿಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳಿಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು **"ತಹ್ರೀಕ್ ಜದಿದ್ ಹಫ್ತಮಾಲ್"** ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಿಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. **"**ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೋ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 01 July 2021, Issue No. 26

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 25ರ ವರದಿಯ ಉಳಿದ ಭಾಗ)**

### ಸಮಾರೋಪ ಸಮಾರಂಭ

ಹುಝೂರೆ ಅನ್ವರ್(ಅಬಿಅ) 5 ಗಂಟೆ 10 ನಿಮಿಷಕ್ಕೆ ಜಲ್ಸ ಸಾಲಾನ ಜರ್ಮನಿಯ ಸಮಾರೋಪ ಭಾಷಣವನ್ನು ನೆರವೇರಿಸಿದರು. ತಶಹುದ್ ತವ್ವೂಝ್ ಮತ್ತು ಸೂರಃ ಫಾತಿಹಾ ಪಠಿಸಿದ ನಂತರ ಈ ಕೆಳಗಿನ ವಚನ ಪಠಿಸಿದರು.

**ಉದ್‌ಊ ಇಲಾ ಸಬೀಲಿ ರಬ್ಬಿಕ ಬಿಲ್‌ಹಿಕ್ಮತಿ ವಲ್ ಮೌಈಝತಿಲ್ ಹಸನತಿ ವಜಾದಿಲ್‌ಹುಮ್ ಬಿಲ್ಲತಿ ಹಿಯಾ ಅಹ್ಸನ್, ಇನ್ನ ರಬ್ಬಕ ಹುವ ಅಲಮು ಬಿಮನ್ ಝಲ್ಲ ಅನ್ ಝಲ್ಲ ಅನ್ ಸಬೀಲಿಹಿ ವಹುವ ಅಲಮು ಬಿಲ್ ಮುಹ್‌ತದೀನ್.**

**ವಮನ್ ಅಹ್ಸನು ಖೌಲಮ್ಮಿಮ್ಮನ್ ದಆ ಇಲಲ್ಲಾಹಿ ವಅಮಿಲ ಸಾಲಿಹಂವ್ವಖಾಲ ಇನ್ನನೀ ಮಿನಲ್ ಮುಸ್ಲಿಮೀನ್.**

ಅನಂತರ ಹುಝೂರ್ ನುಡಿದರು ಅಲ್ಲಾಹನ ಅನುಗ್ರಹದಿಂದ ಹಿಂದಿನ ಮೂರು ನಾಲ್ಕು ವರ್ಷಗಳಿಂದ ಜರ್ಮನಿಯಲ್ಲಿ ಅಹ್ಮದಿಯಾ ಜಮಾಅತಿನ ಪ್ರಚಾರ ಪರಿಚಯ ಹೆಚ್ಚಳಗೊಂಡಿದೆ ಹಿಂದೆಯೂ ಪ್ರಚಾರ ಮಾಡಲಾಗುತಿತ್ತು. ಜರ್ಮನ್ ಜಮಾಅತ್ ಪ್ರಚಾರದ ಮೈದಾನದಲ್ಲಿ ಹಿಂದೆಯೂ ತುಂಬ ಒಳ್ಳೆಯ ಕಾರ್ಯಕ್ಷಮತೆ ತೋರಿಸಿದೆ. ಆದರೆ ಹಿಂದಿನ ಕೆಲವು ವರ್ಷಗಳಿಂದ ಎಲ್ಲ ವರ್ಗಗಳವರೆಗೂ ಜಮಾಅತಿನ ಪರಿಚಯದ ವೇಗ ಹೆಚ್ಚಾಗಿದೆ. ಹಿಂದೆ ಇಷ್ಟು ವಿಶಾಲತೆ ಪಡೆದಿರಲಿಲ್ಲ. ರಾಜಕೀಯ ಜನರಲ್ಲೂ, ವಿಧ್ಯಾವಂತ ವರ್ಗಗಳಲ್ಲೂ, ಸಾರ್ವಜನಿಕರಲ್ಲೂ ಸಹ ಜಮಾಅತ್ ಹಿಂದಿಗಿಂತ ಅತಿ ಹೆಚ್ಚು ಪರಿಚಯ ಹೊಂದಿದೆ. ಅದೇ ಕಾರಣದಿಂದ ಕೆಲ ವರ್ಗಗಳಲ್ಲಿ ಮತ್ತು ಕೆಲ ಪತ್ರಿಕೆಗಳಲ್ಲಿ ನಮ್ಮ ವಿರೋಧ ಚಳುವಳಿ ಹಮ್ಮಿಕೊಳ್ಳಲಾಗಿದೆ. ಜಮಾಅತನ್ನು ಅಪಪ್ರಚರಕ್ಕೆ ಒಳಪಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಅಥವಾ ಮಾಡಲಾಗಿದೆ. ಆದರೆ ಅದರ ಪರಿಹಾರವು ಅಲ್ಲಾಹನು ಅವರಿಂದಲೇ ನೀಡಿದೆ. ಅವರ ರಾಜಕೀಯ ವರ್ಗ, ವಿಧ್ಯಾವಂತ ವರ್ಗ, ಧರ್ಮದಲ್ಲಿ ಆಸಕ್ತಿ ಇಲ್ಲದ ಜನರು ಸಹ ಜಮಾಅತಿನ ಪರವಾಗಿ ಧ್ವನಿ ಎತ್ತಲು ಪ್ರಾರಂಭಿಸಿದ್ದಾರೆ. ಇದು ಜರ್ಮನ್ ಜನರ ಸಜ್ಜನಿಕೆಯು ಆಗಿದೆ. ಕೆಲವು ಕಡೆ ಇಸ್ಲಾಮಿ ಕಾನೂನು ಕಾಯಿದೆ ಮತ್ತು ಶಾಲೆಗಳಲ್ಲಿ ಪಠ್ಯಕ್ರಮಗೋಸ್ಕರ ಜಮಾಅತಿನ ಸಲಹೆಗಳಿಗೆ ಮಾನ್ಯತೆ ಕೊಡುತ್ತಿದ್ದಾರೆ. ನಾವು ಎಲ್ಲಿ ಮಸೀದಿಗಳನ್ನು ನಿರ್ಮಿಸುತ್ತಿದ್ದೇವೆ. ಅಲ್ಲಿ ಬರುವ ಸ್ಥಳೀಯ ರಾಜಕೀಯ ಮುಖಂಡರು ಅಲ್ಲಿಯ ಸ್ಥಳೀಯ ಜನರ ಅನಿಸಿಕೆಗಳಿಂದ ಗೋಚರವಾಗುತ್ತದೆ. ಇದು ಕೇವಲ ಅಲ್ಲಾಹನ ಕಡೆಯಿಂದ ಬೀಸುವ ಅನುಗ್ರಹದ ಗಾಳಿಯಾಗಿದೆ. ಅದರಿಂದ ಜಮಾಅತಿನ ಪರಿಚಯದಲ್ಲಿ ಹೆಚ್ಚಳವಾಗಿದೆ. ಈ ಪರಿಚಯ ವೃದ್ಧಿಯಲ್ಲಿ ನಮ್ಮ ವಿರೋಧಿಗಳ ಪಾತ್ರವು ಇದೆ.

ಹುಝೂರ್ ಅನ್ವರ್(ಅಬಿಅ) ನುಡಿದರು: ಹಝ್ರತ್ ಮಸೀಹ್ ಮೌಊದ್(ಅ) ಯಾರೋ ಒಬ್ಬರು ಹೇಳಿದ ಇಮಿತ್ತ ನಮ್ಮ ಕ್ಷೇತ್ರದಲ್ಲಿ ತುಂಬ ಶಾಂತಿಯಿದೆ ಇಲ್ಲಿ ಯಾವ ವಿರೋಧವು ಇಲ್ಲ. ಅವರು ಹೇಳಿದರು. ವಾಸ್ತವದಲ್ಲಿ ಎಲ್ಲಿ ವಿರೋಧವಿರುತ್ತದೆಯೋ ಅಲ್ಲಿಯೇ ನಮ್ಮ ಸಂದೇಶ ತಲುಪುತ್ತದೆ. ಅಂದ ಹಾಗೆ ಯೂರೋಪ್ ದೇಶಗಳಲ್ಲಿ ವಿವಿಧ ಮಾಧ್ಯಮದಿಂದ ಜಮಾಅತಿಗೆ ವಿರೋಧಕ್ಕೆ ಗುರಿಯಾದ ಮೊದಲ ದೇಶ ಜರ್ಮನಿಯಾಗಿದೆ. ಒಂದು ಕಡೆ ನಮ್ಮ ಜಮಾಅತಿಗೆ ಹೆಚ್ಚು ಬೆಂಬಲ ನೀಡುವವರೆಂದರೆ ಈ ದೇಶದ ಸ್ಥಳೀಯ ಜನರಾಗಿದ್ದಾರೆ. ಇನ್ನೊಂದೆಡೆ ಸಂಖ್ಯೆಯಲ್ಲಿ ಕಡಿಮೆಯಾದರೂ ವಿರೋಧ ಮಾಡುವ ವರ್ಗವು ಇದೆ. ಅಂದ ಹಾಗೆ ಜರ್ಮನಿಯ ಜನರಿಂದ ಇಸ್ಲಾಮಿನ ವಾಸ್ತವ ಅರಿಯುವ ವಿರೋಧದಲ್ಲಿ ಪ್ರಗತಿ ಕಾಣಬಹುದು ಎಂಬ ಆಶಯ ಹೊಂದಬಹುದಾಗಿದೆ. ಇನ್‌ಶಾಅಲ್ಲಾಹ್

ಹುಝೂರೆ ಅನ್ವರ್(ಅಬಿಅ) ನುಡಿದರು. ಅಂದ ಹಾಗೆ ನಮಗೆ ಅವರಿಂದೇನು ರಾಜಕೀಯ ಲಾಭ ಗಳಿಸಬೇಕಿಲ್ಲ ಅಥವಾ ತಮ್ಮ ಸ್ವಾರ್ಥವೇನು ಸಾಧಿಸುವುದಿಲ್ಲ. ಅದು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತ ದೃಢಚಿತ್ತತೆಯಿಂದ ಇಸ್ಲಾಮಿನ ಗುಣಗಳನ್ನು ತಿಳಿಸಬೇಕಾಗಿದೆ. ನಿಸ್ಸಂಶಯವಾಗಿಯೂ ಹೃದಯಗಳನ್ನು ತೆರವುಗೊಳಿಸುವ ಕಾರ್ಯ ಅಲ್ಲಾಹನದ್ದಾಗಿದೆ. ನಿಜವಾದ ಧಾರ್ಮಿಕ ಸನ್ಮಾರ್ಗದಲ್ಲಿ ನಡೆಸುವ ಕಾರ್ಯ ಅಲ್ಲಾಹನದ್ದಾಗಿದೆ. ಆದರೆ ಅಲ್ಲಾಹನು ತಮ್ಮ ಮೇಲೂ ಕೆಲವು ಕರ್ತವ್ಯಗಳನ್ನು ಒಪ್ಪಿಸಿರುತ್ತಾನೆ. ನಮಗೂ ಈ ನಿರ್ದೇಶನಗಳನ್ನು ಪಾಲಿಸುತ್ತ ಲೋಕಕ್ಕೆ ದಾರಿ ತೋರಿಸುವ ಅಗತ್ಯವಿದೆ. ಆದುದರಿಂದ ಮೊದಲನೆಯದಾಗಿ ಶಾಂತಿ ಮತ್ತು ಪ್ರೀತಿಯ ಕಿರು ಹೊತ್ತಿಗೆಯ (ಲಿಟ್ರೇಚರ್) ಮೂಲಕ ನೀವು ಜನರನ್ನು ವಿಸ್ತೃತ ರೂಪದಲ್ಲಿ ಇಸ್ಲಾಮಿನ ನಿಜವಾದ ಶಿಕ್ಷಣವನ್ನು ತಲುಪಿಸಬೇಕಾಗಿದೆ. ಆದರೆ ಈಗ ಲೋಕಕ್ಕೆ ಇದು ಸಹ ತಿಳಿಸುವ ಅಗತ್ಯವಿದೆ. ಅದರಲ್ಲಿ ಜರ್ಮನಿಯೂ ಒಳಗೊಂಡಿದೆ. ಅಲ್ಲಾಹನು ತನ್ನ ವಾಗ್ದಾನದ ಪ್ರಕಾರ ನಿಮ್ಮೆರಗಾಗಿ ಹಝ್ರತ್ ಪೈಗಂಬರ್(ಸ) ರವರಿಗೆ ಮಾರ್ಗದರ್ಶಕರಾಗಿ ಕಳುಹಿಸಿದ್ದಾನೆ, ಅವರ ನೈಜ ಶಿಕ್ಷಣವನ್ನು ಜಾರಿಯಲ್ಲಿರಿಸಲು ಮಸೀಹ್ ಮೌಊದ್ ಮಹದಿ(ಅ) ರವರನ್ನು ಕಳುಹಿಸಿದ್ದಾನೆ. ಇದೀಗ ತಮ್ಮ ಪರಲೋಕ ಜೀವನದ ಸುಧಾರಣೆಗಾಗಿ ಅವರಲ್ಲಿ ವಿಶ್ವಾಸ ಹೊಂದುವ ಪ್ರಯತ್ನ ಮಾಡಬೇಕು.

ಹುಝೂರೆ ಅನ್ವರ್(ಅಬಿಅ) ನುಡಿದರು: ಅಂದ ಹಾಗೆ ಯಾವ ರೀತಿ ಲಕ್ಷೋಪ ಲಕ್ಷ ಜನರಿಗೆ ಕಿರುಹೊತ್ತಿಗೆಯ ಮೂಲಕ ಶಾಂತಿಯ ಸಂದೇಶವನ್ನು ತಲುಪಿಸಲಾಗಿದೆಯೋ ಅದೇ ರೀತಿ ಲಕ್ಷೋಪ ಲಕ್ಷ ಜನರಿಗೆ ಅಲ್ಲಾಹನ ಕಡೆ ಕರೆ ನೀಡಲು ಕಿರುಹೊತ್ತಿಗೆ ತಲುಪಿಸಬೇಕಾಗಿದೆ. ಆಗ ಅದೇ ವರ್ಗದಿಂದ ನಮ್ಮ ಪರವಾಗಿ ವಾದಿಸುವವರಂತೆ ಹುಟ್ಟಬಹುದು, ಹಾಗೂ ವಿರೋಧವು ಮಾಡತೊಡಗಬಹುದು. ಇದರಿಂದ ನಮಗೇನು ವ್ಯತ್ಯಾಸ ಬರುವುದಿಲ್ಲ. ಇಲ್ಲಿಯ ಬಹುಸಂಖ್ಯಾತ ವರ್ಗವು ವಿದ್ಯಾವಂತರಾಗಿದ್ದಾರೆ, ನಮ್ಮ ಈ ಸಂದೇಶವನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದಾರೆ. ಧರ್ಮದ ವಿಷಯದಲ್ಲಿ ಬಲಾತ್ಕಾರವಿಲ್ಲ. ನಮಗೆ ಬೇರೊಬ್ಬರೊಂದಿಗೂ ಜಗಳ ಮಾಡಬೇಕಾಗಿಲ್ಲ. ಯಾವ ಮಾತನ್ನು ನಾವು ಒಳ್ಳೆಯದೆಂದು ಭಾವಿಸುತ್ತೇವೆ. ಅದು ಇತರರಿಗೆ ತಿಳಿಸುವುದು ನಮ್ಮ ಕೆಲಸವಾಗಿದೆ. ನಾನು ಹೇಳಿದ ಹಾಗೆ ಇದೊಂದು ಹೊಣೆಗಾರಿಕೆಯಾಗಿದೆ. ಅದು ನಮಗೆ ನೀಡಲಾಗಿದೆ.

ಹುಝೂರೆ ಅನ್ವರ್(ಅಬಿಅ) ನುಡಿದರು:

ನಾನು ಪಠಿಸಿದಂತ ಈ ವಚನಗಳಲ್ಲಿ ಅಲ್ಲಾಹನೆಡೆ ಆಹ್ವಾನನನ್ನು ನೀಡುವ ಕಾರ್ಯದತ್ತ ಗಮನ ಸೆಳೆಯಲಾಗಿದೆ. ಅಷ್ಟೇ ಅಲ್ಲ ಈ ಕಾರ್ಯ ಹೇಗೆ ನಡೆಸಬೇಕು? ಎಂಬ ರೀತಿಯೂ ತಿಳಿಸಲಾಗಿದೆ. ಅಲ್ಲಾಹನೆಡೆ ಆಹ್ವಾನಿಸುವವರ ಸ್ಥಿತಿ ಹೇಗಿರಬೇಕು? ಆ ಬಗ್ಗೆಯೂ ಹೇಳಿಕೊಡಲಾಗಿದೆ. ಮೊದಲ ವಚನದ ಅನುವಾದವೆಂದರೆ "ಜಾಣ್ಮೆಯಿಂದಲೂ ಸದುಪದೇಶದಿಂದಲು ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟು ಹೋಗುವವರು ಯಾರೆಂದು ನಿನ್ನ ಪ್ರಬು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರು ಎಂದು ಅವನು ಚೆನ್ನಾಗಿ ತಿಳಿದಿರುತ್ತಾನೆ.

ಎರಡನೆಯ ವಚನದ ಅನುವಾದವೆಂದರೆ ಅಲ್ಲಾಹನೆಡೆಗೆ (ಜನರನ್ನು) ಆಹ್ವಾನಿಸುವ ಸತ್ಕರ್ಮ ನಿರತರಾಗಿರುವ ಹಾಗೂ ನಾನು ಖಂಡಿತವಾಗಿಯೂ ಮುಸ್ಲಿಮರ ಪೈಕಿಯವನಾಗಿದ್ದೇನೆ' ಎಂದು ಹೇಳುವವನಿಗಿಂತ ಉತ್ತಮ ಮಾತನಾಡುವವನು ಯಾರಿದ್ದಾನೆ.

ಅಂದ ಹಾಗೆ ಮೊದಲನೇ ವಚನದಲ್ಲಿ ಜಾಣ್ಮೆಯಿಂದ ಪ್ರಚಾರ ಮಾಡಲು ತಿಳಿಸಿದೆ. ಜಾಣ್ಮೆ ಎಂದರೇನು? ಸಾಮಾನ್ಯವಾಗಿ ಇದರ ಅರ್ಥ ಬುದ್ಧಿಶಕ್ತಿ ಎಂದು ತಿಳಿಯುತ್ತೇವೆ. ಅಂದರೆ ಯೊಚಿಸಿ ಮಾತನಾಡಿರಿ ಎಂದು. ಅದರ ಇನ್ನು ಕೆಲವು ಬೇರೆ ಅರ್ಥಗಳಿವೆ. ಉದಾಹರಣೆಗೆ ಜ್ಞಾನ ಎಂದರೆ ವಿಜ್ಞಾನದ ಜ್ಞಾನವು ಇದೆ. ಬೇರೆ ಜ್ಞಾನಗಳೂ ಇವೆ. ನ್ಯಾಯ ಮತ್ತು ಸಮಾನತೆ ಇದು ಸಹ ಜಾಣ್ಮೆಯಾಗಿದೆ. ಇತರರ ತಪ್ಪುಗಳನ್ನು ನೋಡಿ ಸಹನೆ ತೋರುವುದು ಮತ್ತು ಅನುಕಂಪ ತೋರುವುದು ತನ್ನ ದೃಢವಾದ ನಿಲುವು, ಏನು

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.